# ಅಲ್ಲಾಹನ ತಿಂಗಳಾದ ಮುಹರ್ರಮ್‌ನ ಬಗ್ಗೆಯಿರುವ ಹದೀಸ್‌ಗಳು

[ رسالة في أحاديث شهر الله المحرم ]

**[Kannada – ಕನ್ನಡ – كنادي ]**


**ಅಶ್ಶೈಖ್ ಅಬ್ದುಲ್ಲಾಹ್ ಇಬ್ನ್ ಸಾಲಿಹ್ ಅಲ್‌ಫೌಝಾನ್**

**الشيخ عبد الله بن صالح الفوزان**

**ಅನುವಾದ: ಮುಹಮ್ಮದ್ ಹಂಝಾ ಪುತ್ತೂರು**

**ترجمة: محمد حمزة بتوري**



www.islamhouse.com

**1435 – 2014**

# ಒಳಪುಟಗಳಲ್ಲಿ...

1. ದಿನಗಳು ಮತ್ತು ವರ್ಷಗಳು ಹಾದುಹೋಗುವುದರಲ್ಲಿರುವ ನೀತಿಪಾಠಗಳು 3

2. ಇಹಲೋಕದ ಬಗ್ಗೆಯಿರುವ ಆಸೆಗಳನ್ನು ಕುಗ್ಗಿಸುವುದಕ್ಕಿರುವ ಪ್ರೋತ್ಸಾಹ 7

3. ಮುಹರ್ರಮ್ ಎಂಬ ಅಲ್ಲಾಹನ ತಿಂಗಳ ಶ್ರೇಷ್ಠತೆ 12

4. ಚರಿತ್ರೆಯ ಪ್ರಕಾರ ಆಶೂರಾ ದಿನ 17

5. ಆಶೂರಾ ದಿನದಂದು ಉಪವಾಸ ಆಚರಿಸುವುದಕ್ಕಿರುವ ಪ್ರೋತ್ಸಾಹ 21

6. ಆಶೂರಾ ಉಪವಾಸದ ಹಿಂದಿರುವ ಯುಕ್ತಿಯೇನು? 25

7. ಹತ್ತನೇ ದಿನದೊಂದಿಗೆ ಒಂಬತ್ತನೇ ದಿನ ಕೂಡ ಉಪವಾಸ ಆಚರಿಸುವುದು ಪ್ರೋತ್ಸಾಹನೀಯವಾಗಿದೆ 29

بِسْمِ اللهِ الرَّحْمَـنِ الرَّحِيم

# ದಿನಗಳು ಮತ್ತು ವರ್ಷಗಳು ಹಾದುಹೋಗುವುದರಲ್ಲಿರುವ ನೀತಿಪಾಠಗಳು

ಅತ್ಯುನ್ನತನಾದ ಅಲ್ಲಾಹು ಹೇಳುತ್ತಾನೆ:

﴿ إِنَّ فِي خَلْقِ السَّمَاوَاتِ وَالْأَرْضِ وَاخْتِلَافِ اللَّيْلِ وَالنَّهَارِ لَآيَاتٍ لِأُولِي الْأَلْبَابِ ﴾

**"ಖಂಡಿತವಾಗಿಯೂ ಆಕಾಶಗಳ ಮತ್ತು ಭೂಮಿಯ ಸೃಷ್ಟಿಯಲ್ಲಿ ಹಾಗೂ ರಾತ್ರಿ ಮತ್ತು ಹಗಲಿನ ಬದಲಾವಣೆಯಲ್ಲಿ ಬುದ್ಧಿವಂತರಿಗೆ ದೃಷ್ಟಾಂತಗಳಿವೆ." [ಕುರ್‌ಆನ್ 3:190]**

ಮತ್ತು ಅತ್ಯುನ್ನತನಾದ ಅಲ್ಲಾಹು ಹೇಳುತ್ತಾನೆ:

﴿ إِنَّ فِي اخْتِلَافِ اللَّيْلِ وَالنَّهَارِ وَمَا خَلَقَ اللَّهُ فِي السَّـمَاوَاتِ وَالْأَرْضِ لَآيَـاتٍ لِقَـوْمٍ يَتَّقُونَ ﴾

**"ಖಂಡಿತವಾಗಿಯೂ ರಾತ್ರಿ ಮತ್ತು ಹಗಲಿನ ಬದಲಾವಣೆಯಲ್ಲಿ ಮತ್ತು ಅಲ್ಲಾಹು ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿ ಏನೆಲ್ಲ ಸೃಷ್ಟಿಸಿರುವನೋ ಅವುಗಳಲ್ಲಿ ಭಯಭಕ್ತಿಯುಳ್ಳ ಜನರಿಗೆ ದೃಷ್ಟಾಂತಗಳಿವೆ." [ಕುರ್‌ಆನ್ 10:6]**

ಮತ್ತು ಅತ್ಯುನ್ನತನಾದ ಅಲ್ಲಾಹು ಹೇಳುತ್ತಾನೆ:

﴿ يُقَلِّبُ اللَّهُ اللَّيْلَ وَالنَّهَارَ إِنَّ فِي ذَلِكَ لَعِبْرَةً لِأُولِي الْأَبْصَارِ ﴾

**“ಅಲ್ಲಾಹು ರಾತ್ರಿಯನ್ನು ಮತ್ತು ಹಗಲನ್ನು ಬದಲಾಯಿಸುತ್ತಿರುವನು. ಖಂಡಿತ ವಾಗಿಯೂ ದೃಷ್ಟಿಗಳಿರುವ ಜನರಿಗೆ ಅದರಲ್ಲಿ ನೀತಿಪಾಠವಿದೆ.” [ಕುರ್‌ಆನ್ 24:44]**

ಈ ಆದರಣೀಯ ಆಯತ್‌ಗಳಲ್ಲಿ ಅಲ್ಲಾಹು ಅವನ ಜ್ಞಾನ ಮತ್ತು ಸಾಮರ್ಥ್ಯದ ಸಂಪೂರ್ಣತೆಯನ್ನು ಹಾಗೂ ಅವನ ಯುಕ್ತಿ ಮತ್ತು ಕರುಣೆಯ ಪರಿಪೂರ್ಣತೆ ಯನ್ನು ಸೂಚಿಸುವ ನೈಸರ್ಗಿಕ ದೃಷ್ಟಾಂತಗಳನ್ನು ತಿಳಿಸಿಕೊಡುತ್ತಿದ್ದಾನೆ. ರಾತ್ರಿ ಮತ್ತು ಹಗಲಿನ ಬದಲಾವಣೆ, ಅಂದರೆ ಅವು ಒಂದರ ನಂತರ ಒಂದು ಪುನರಾವರ್ತಿಸಿ ಬರುವುದು, ಕೆಲವೊಮ್ಮೆ ಅವು ದೀರ್ಘವೂ ಕೆಲವೊಮ್ಮೆ ಹ್ರಸ್ವವೂ ಆಗಿರುವುದು, ಕೆಲವೊಮ್ಮೆ ಉಷ್ಣವೂ ಕೆಲವೊಮ್ಮೆ ಚಳಿಯೂ ಕೆಲವೊಮ್ಮೆ ಮಧ್ಯಮ ಸ್ಥಿತಿಯೂ ಆಗಿರುವುದು, ಭೂಮಿಯಲ್ಲಿರುವವರಿಗೆ ಅದರಿಂದ ಲಭ್ಯವಾಗುವ ಮಹಾ ಪ್ರಯೋಜನಗಳು, ಇವೆಲ್ಲವೂ ಅತ್ಯುನ್ನತನಾದ ಅಲ್ಲಾಹನಿಗೆ ಅವನ ಸೃಷ್ಟಿಗಳೊಂದಿಗಿರುವ ಅನುಗ್ರಹ ಮತ್ತು ಕರುಣೆಯಲ್ಲಿ ಒಳಗೊಂಡದ್ದಾಗಿವೆ. ಸ್ವಸ್ಥವಾದ ಬುದ್ಧಿಗಳನ್ನು ಮತ್ತು ತೇಜಸ್ಸಿನಿಂದ ಕೂಡಿದ ದೃಷ್ಟಿಗಳನ್ನು ಹೊಂದಿರುವ, ಮತ್ತು ರಾತ್ರಿ ಹಾಗೂ ಹಗಲಿನ ಸೃಷ್ಟಿಯಲ್ಲಿ, ಸೂರ್ಯ ಹಾಗೂ ಚಂದ್ರನ ಸೃಷ್ಟಿಯಲ್ಲಿ ಅಲ್ಲಾಹನ ಯುಕ್ತಿಯನ್ನು ಗ್ರಹಿಸುವ, ತಿಂಗಳುಗಳು ಮತ್ತು ವರ್ಷಗಳು ನಿರಂತರ ಪುನರಾರ್ತಿಸುವುದರಲ್ಲಿರುವ, ಮತ್ತು ರಾತ್ರಿಗಳು ಹಾಗೂ ದಿನಗಳು ಒಂದರ ನಂತರ ಒಂದರಂತೆ ಬರುವುದರಲ್ಲಿರುವ ಯುಕ್ತಿಯನ್ನು ಗ್ರಹಿಸುವ ಜನರ ಹೊರತು ಇತರ ಯಾರೂ ಇವುಗಳನ್ನು ಗ್ರಹಿಸಲಾರರು.

ಅತ್ಯುನ್ನತನಾದ ಅಲ್ಲಾಹು ರಾತ್ರಿ ಮತ್ತು ಹಗಲನ್ನು ಕರ್ಮಗಳ ಖಜಾನೆಗಳನ್ನಾಗಿ, ಮತ್ತು ಅವಧಿಗಳಿಗಿರುವ ಹಂತಗಳನ್ನಾಗಿ ಮಾಡಿದ್ದಾನೆ. ಅವುಗಳ ಪೈಕಿ ಒಂದು ಹೋದರೆ ಅದರ ಹಿಂದೆಯೇ ಇನ್ನೊಂದು ಬರುತ್ತದೆ. ಇದು ಕರ್ಮವೆಸಗುವವರ ಆಸಕ್ತಿಯನ್ನು ಸತ್ಕರ್ಮಗಳೆಡೆಗೆ ಉದ್ದೀಪಿಸು ವುದಕ್ಕಾಗಿದೆ, ಮತ್ತು ಅವರನ್ನು ಆಜ್ಞಾಪಾಲನೆ ಮಾಡುವುದರಲ್ಲಿ ಸದಾ

ಕಾರ್ಯನಿರತನನ್ನಾಗಿ ಮಾಡುವುದಕ್ಕಾಗಿದೆ. ಆದ್ದರಿಂದ ಯಾರಿಗಾದರೂ ರಾತ್ರಿಯಲ್ಲಿ ನಿರ್ವಹಿಸಬೇಕಾದ ಒಂದು ಕರ್ಮವು ನಷ್ಟವಾದರೆ ಅದನ್ನು ಹಗಲಲ್ಲಿ ನಿರ್ವಹಿಸಬಹುದಾಗಿದೆ ಮತ್ತು ಯಾರಿಗಾದರೂ ಹಗಲಲ್ಲಿ ನಿರ್ವಹಿಸಬೇಕಾದ ಒಂದು ಕರ್ಮವು ನಷ್ಟವಾದರೆ ಅದನ್ನು ರಾತ್ರಿಯಲ್ಲಿ ನಿರ್ವಹಿಸಬಹುದಾಗಿದೆ.

ಅತ್ಯುನ್ನತನಾದ ಅಲ್ಲಾಹು ಹೇಳುತ್ತಾನೆ:

﴿ وَهُوَ الَّذِي جَعَلَ اللَّيْلَ وَالنَّهَارَ خِلْفَةً لِمَنْ أَرَادَ أَنْ يَذَّكَّرَ أَوْ أَرَادَ شُكُورًا ﴾

**"ಚಿಂತನೆ ಮಾಡಲು ಉದ್ದೇಶಿಸುವವರಿಗೆ ಅಥವಾ ಕೃತಜ್ಞತೆ ಸಲ್ಲಿಸಲು ಉದ್ದೇಶಿಸುವವರಿಗಾಗಿ ರಾತ್ರಿ ಮತ್ತು ಹಗಲನ್ನು ಒಂದರ ನಂತರ ಬರುವ ಇನ್ನೊಂದನ್ನಾಗಿ ಮಾಡಿದವನು ಅವನಾಗಿದ್ದಾನೆ." [ಕುರ್‌ಆನ್ 25:62]**

ಒಬ್ಬ ವಿಶ್ವಾಸಿಯು ರಾತ್ರಿಗಳು ಮತ್ತು ದಿನಗಳು ಹಾದು ಹೋಗುವುದರಲ್ಲಿರುವ ನೀತಿಪಾಠವನ್ನು ಪಡೆದುಕೊಳ್ಳಬೇಕಾಗಿದೆ. ಯಾಕೆಂದರೆ ರಾತ್ರಿ ಮತ್ತು ಹಗಲು ಹೊಸತಾಗಿರುವ ಎಲ್ಲವನ್ನೂ ಹಳತಾಗಿಸುತ್ತವೆ, ದೂರವಾಗಿರುವ ಎಲ್ಲವನ್ನೂ ಹತ್ತಿರವಾಗಿಸುತ್ತವೆ, ಆಯುಷ್ಯವನ್ನು ಕರಗಿಸುತ್ತವೆ, ಎಳೆಯರನ್ನು ವೃದ್ಧರನ್ನಾಗಿ ಮಾಡುತ್ತವೆ, ಹಿರಿಯರನ್ನು ಕಣ್ಮರೆಗೊಳಿಸುತ್ತವೆ. ಮನುಷ್ಯನ ಮೂಲಕ ಹಾದು ಹೋಗುವ ಪ್ರತಿಯೊಂದು ದಿನವೂ ಅವನನ್ನು ಇಹಲೋಕದಿಂದ ದೂರಗೊಳಿಸಿ ಪರಲೋಕಕ್ಕೆ ಹತ್ತಿರಗೊಳಿಸುತ್ತದೆ.

ಆದ್ದರಿಂದ —ಅಲ್ಲಾಹನ ಮೇಲಾಣೆ— ತನ್ನನ್ನು ತಾನೇ ವಿಚಾರಣೆ ಮಾಡುವವನು, ಮುಗಿದು ಹೋಗುತ್ತಿರುವ ತನ್ನ ಆಯುಷ್ಯದ ಬಗ್ಗೆ ಚಿಂತಿಸುವವನು, ತನ್ನ ಧರ್ಮಕ್ಕೆ ಮತ್ತು ತನ್ನ ಇಹಲೋಕದ ಜೀವನಕ್ಕೆ ಪ್ರಯೋಜನವಾಗುವ ವಿಧದಲ್ಲಿ ತನ್ನ ಸಮಯವನ್ನು ಸದುಪಯೋಗ ಪಡಿಸುವವನು ಸೌಭಾಗ್ಯವಂತನಾಗಿದ್ದಾನೆ. ಆದರೆ ಯಾರ ಸಮಯವು ಪೋಲಾಗುತ್ತಿದೆಯೋ, ಕೈತಪ್ಪಿದ ಕರ್ಮಗಳು ಹೆಚ್ಚಾಗುತ್ತಿವೆಯೋ ಮತ್ತು

ನಷ್ಟಗಳು ಅಧಿಕವಾಗುತ್ತಿವೆಯೋ, ಅಂತಹವನ ಬಗ್ಗೆ ನಾವು ಅಲ್ಲಾಹನಲ್ಲಿ ರಕ್ಷೆಯನ್ನು ಬೇಡುತ್ತಿದ್ದೇವೆ.

ಈ ದಿನಗಳಲ್ಲಿ (ನಮ್ಮ ಮೇಲೆ) ಸಾಕ್ಷಿಯಾಗಿರುವ ಗತ ವರ್ಷಕ್ಕೆ ನಾವು ವಿದಾಯ ಕೋರುತ್ತಿದ್ದೇವೆ ಮತ್ತು ಹೊಸ ವರ್ಷವನ್ನು ಸ್ವಾಗತಿಸುತ್ತಿದ್ದೇವೆ. ಆದ್ದರಿಂದ ನಾವು ಸ್ವತಃ ನಮ್ಮನ್ನು ವಿಚಾರಣೆ ಮಾಡುವುದು ಕಡ್ಡಾಯವಾಗಿದೆ. ಆದ್ದರಿಂದ ಯಾರಾದರೂ ತಮ್ಮ ಕಡ್ಡಾಯ ಕರ್ಮಗಳಲ್ಲಿ ಅಪೂರ್ಣತೆ ತೋರಿಸಿದ್ದರೆ ಅವನು ತಾನು ಕಳೆದುಕೊಂಡದ್ದನ್ನು ಪೂರ್ಣಗೊಳಿಸಲಿ. ಅಲ್ಲಾಹು ಮತ್ತು ಅವನ ರಸೂಲರು ವಿರೋಧಿಸಿದ ಕೃತ್ಯಗಳನ್ನು ಮಾಡುವ ಮೂಲಕ ಯಾರಾದರೂ ಸ್ವತಃ ತಮ್ಮ ಮೇಲೆ ಅನ್ಯಾಯವೆಸಗಿದ್ದರೆ ಆಯುಷ್ಯವು ಕೊನೆಗೊಳ್ಳುವುದಕ್ಕೆ ಮೊದಲು ಅವನು ಅದರಿಂದ ಮುಕ್ತನಾಗಲಿ. ಅಲ್ಲಾಹು ಯಾರಿಗೆ ಧರ್ಮದಲ್ಲಿ ಸ್ಥಿರತೆಯನ್ನು ನೀಡಿರುವನೋ ಅವರು ಅದಕ್ಕಾಗಿ ಅಲ್ಲಾಹನನ್ನು ಸ್ತುತಿಸಲಿ ಮತ್ತು ಮರಣವೇಳೆಯಲ್ಲೂ ಸ್ಥಿರತೆ ನೀಡುವಂತೆ ಬೇಡಿಕೊಳ್ಳಲಿ.

ಈ ವಿಚಾರಣೆಯು ಈ ದಿನಗಳಿಗೆ ಮಾತ್ರ ಸೀಮಿತವಾಗಿರಬಾರದು. ಬದಲಾಗಿ ಎಲ್ಲ ಸಮಯ ಸಂದರ್ಭಗಳಲ್ಲೂ ಬೇಡುವಂತದ್ದಾಗಿರಬೇಕು. ಯಾರು ನಿರಂತರ ವಿಚಾರಣೆ ಮಾಡುತ್ತಿರುವರೋ ಅವರ ಸ್ಥಿತಿಯು ಸ್ಥಿರವಾಗಿರುವುದು ಮತ್ತು ಅವರ ಕರ್ಮಗಳು ಉತ್ತಮವಾಗುವುದು. ಆದರೆ ಯಾರು ವಿಚಾರಣೆ ಮಾಡುವುದರ ಬಗ್ಗೆ ಅಲಸ್ಯರಾಗಿರುತ್ತಾರೋ ಅವರ ಸ್ಥಿತಿಯು ನಿಕೃಷ್ಟವಾಗು ವುದು ಮತ್ತು ಅವರ ಕರ್ಮಗಳು ಹೊಲಸಾಗುವುದು.

ಆದರೆ ದುರದೃಷ್ಟಕರವೇನೆಂದರೆ, ಜನರಲ್ಲಿ ಅನೇಕ ಮಂದಿ ವರ್ಷದ ಆರಂಭದಲ್ಲಿ ಆತ್ಮಸುಧಾರಣೆ ಮಾಡುವ ದೃಢನಿರ್ಧಾರವನ್ನು ಕೈಗೊಳ್ಳುತ್ತಾರೆ. ತರುವಾಯ ದಿನಗಳ ನಂತರ ದಿನಗಳು, ತಿಂಗಳುಗಳ ನಂತರ ತಿಂಗಳುಗಳು ಕಳೆದುಹೋಗುತ್ತವೆ. ತರುವಾಯ ಅವರು ಒಂದು ವರ್ಷವನ್ನು ಪೂರ್ಣಗೊಳಿಸುತ್ತಾರೆ. ಆದರೆ ಅವರ ಸ್ಥಿತಿಯು ಬದಲಾಗಿರುವುದಿಲ್ಲ. ಅವರು

ಸತ್ಕರ್ಮಗಳನ್ನು ಹೆಚ್ಚಿಸಿರುವುದಿಲ್ಲ ಮತ್ತು ದುಷ್ಕರ್ಮಗಳ ಬಗ್ಗೆ ಪಶ್ಚಾತ್ತಾಪ ಪಟ್ಟಿರುವುದಿಲ್ಲ. ಇದು ಸೋಲು ಮತ್ತು ನಷ್ಟದ ಚಿಹ್ನೆಯಾಗಿದೆ.

ಓ ಅಲ್ಲಾಹ್, ನಮ್ಮ ಕರ್ಮಗಳ ಪೈಕಿ ಕೊನೆಯ ಕರ್ಮಗಳನ್ನು ಒಳಿತನ್ನಾಗಿಸು, ನಮ್ಮ ಆಯುಷ್ಯದ ಪೈಕಿ ಕೊನೆಯ ಸಮಯವನ್ನು ಉತ್ತಮವಾಗಿಸು, ನಮ್ಮ ದಿನಗಳ ಪೈಕಿ ನಿನ್ನನ್ನು ಭೇಟಿಯಾಗುವ ದಿನವನ್ನು ಒಳಿತನ್ನಾಗಿಸು, ಓ ಅಲ್ಲಾಹ್, ನಿನ್ನ ಆಜ್ಞಾಪಾಲನೆಯ ಮೂಲಕ ಮುಸ್ಲಿಮರಿಗೆ ಪರಾಕ್ರಮವನ್ನು ದಯಪಾಲಿಸು. ನಿನ್ನ ಆಜ್ಞೋಲ್ಲಂಘನೆಯ ಮೂಲಕ ಅವರನ್ನು ನಿಂದ್ಯರನ್ನಾಗಿ ಮಾಡದಿರು. ಓ ಅಲ್ಲಾಹ್, ನಮ್ಮ ಈ ವರ್ಷವನ್ನು ಮತ್ತು ಇದರ ನಂತರದ ವರ್ಷಗಳನ್ನು ನಿರ್ಭಯದ ವರ್ಷಗಳನ್ನಾಗಿ, ಪರಾಕ್ರಮದ ವರ್ಷಗಳನ್ನಾಗಿ, ಇಸ್ಲಾಮ್ ಮತ್ತು ಮುಸ್ಲಿಮರಿಗೆ ಸಹಾಯಕವಾಗುವ ವರ್ಷಗಳನ್ನಾಗಿ ಮಾಡು. ನಿನ್ನ ಅನುಗ್ರಹಗಳನ್ನು ನಮ್ಮ ಮೇಲೆ ಸುರಿಸು. ಅದಕ್ಕಾಗಿ ಕೃತಜ್ಞತೆ ಸಲ್ಲಿಸುವ ಸೌಭಾಗ್ಯವನ್ನು ನೀಡು.

وَصَلَّى اللَّهُ عَلَى نَبِيِّنَا مُحَمَّدٍ...

## ಇಹಲೋಕದ ಬಗ್ಗೆಯಿರುವ ಆಸೆಗಳನ್ನು ಕುಗ್ಗಿಸುವುದಕ್ಕಿರುವ ಪ್ರೋತ್ಸಾಹ

عَنِ ابْنِ عُمَرَ ﵄ قَالَ: أَخَذَ رَسُولُ اللَّهِ ﷺ بِمَنْكِبَيَّ فَقَالَ: «كُنْ فِي الدُّنْيَا كَأَنَّكَ غَرِيبٌ أَوْ عَابِرُ سَبِيلٍ»، وَكَانَ ابْنُ عُمَرَ ﵄ يَقُولُ: إِذَا أَمْسَيْتَ فَلَا تَنْتَظِرِ الصَّبَاحَ،

وَإِذَا أَصْبَحْتَ فَلَا تَنْتَظِرِ الْمَسَاءَ، وَخُذْ مِنْ صِحَّتِكَ لِمَرَضِكَ، وَمِنْ حَيَاتِكَ لِمَوْتِـكَ.
[أخرجه البخاري]

**ಇಬ್ನ್ ಉಮರ್(﵄)ರಿಂದ ವರದಿ: ಅವರು ಹೇಳುತ್ತಾರೆ: ಅಲ್ಲಾಹನ ರಸೂಲ್(ﷺ)ರವರು ನನ್ನ ಎರಡು ಹೆಗಲುಗಳನ್ನು ಹಿಡಿದು ಹೇಳಿದರು: ನೀನೊಬ್ಬ ಅಪರಿಚಿತನೋ ಎಂಬಂತೆ ಅಥವಾ ದಾರಿಯಲ್ಲಿ ಹಾದುಹೋಗು ವವನೋ ಎಂಬಂತೆ "ನೀನು ಇಹಲೋಕದಲ್ಲಿ ಜೀವಿಸು." ಇಬ್ನ್ ಉಮರ್(﵄) ರವರು ಹೇಳುತ್ತಿದ್ದರು: "ನೀನು ಸಂಜೆಯನ್ನು ಪ್ರವೇಶಿಸಿದರೆ ಬೆಳಗನ್ನು ನಿರೀಕ್ಷಿಸದಿರು ಮತ್ತು ಬೆಳಗನ್ನು ಪ್ರವೇಶಿಸಿದರೆ ಸಂಜೆಯನ್ನು ನಿರೀಕ್ಷಿಸದಿರು. ನೀನು ರೋಗಿಯಾಗುವುದಕ್ಕೆ ಮೊದಲು ನಿನ್ನ ಆರೋಗ್ಯದಿಂದ ಪ್ರಯೋಜನ ಪಡೆ ಮತ್ತು ನೀನು ಮರಣಹೊಂದುವುದಕ್ಕೆ ಮೊದಲು ನಿನ್ನ ಬದುಕಿನಿಂದ ಪ್ರಯೋಜನ ಪಡೆ." [ಅಲ್‌ಬುಖಾರೀ]**[1]

ಸಮಯಗಳನ್ನು ಸದುಪಯೋಗಪಡಿಸುವುದು, ಆಸೆಗಳನ್ನು ಕುಗ್ಗಿಸುವುದನ್ನು ಪ್ರೋತ್ಸಾಹಿಸುವುದು, ಮರಣಕ್ಕೆ ಮುಂಚಿತವಾಗಿ ಪಶ್ಚಾತ್ತಾಪ ಪಡುವುದು ಮತ್ತು ಮರಣಕ್ಕಾಗಿ ಸಿದ್ಧಗೊಳ್ಳುವುದು ಕಡ್ಡಾಯವೆಂದು ಈ ಹದೀಸ್ ಸೂಚಿಸುತ್ತದೆ. ಪರಲೋಕವನ್ನು ನೆನಪಿಸುವುದಕ್ಕೆ ಮತ್ತು ಇಹಲೋಕದ ವಂಚನೆಗೆ ಬಲಿಯಾಗ ದಿರುವುದಕ್ಕೆ ಈ ಹದೀಸ್ ತೀಕ್ಷ್ಣವಾದ ಉಪದೇಶವಾಗಿದೆ. ಯಾಕೆಂದರೆ ಇಹಲೋಕವು ನಶ್ವರವಾಗಿದೆ. ಆಯುಷ್ಯವು ಎಷ್ಟೇ ದೀರ್ಘವಾದರೂ, ಇಹಲೋಕವು ಹಾದು ಹೋಗುವುದಕ್ಕಿರುವ ಒಂದು ಮನೆಯಾಗಿದೆಯೇ ಹೊರತು ಶಾಶ್ವತ ವಾಸಕ್ಕಿರುವ ಮನೆಯಲ್ಲ. ಎಲ್ಲ ಆತ್ಮಗಳೂ ಮರಣದ ರುಚಿಯನ್ನು ಆಸ್ವಾದಿಸಲಿವೆ. ಇದೊಂದು ದೃಕ್ಸಾಕ್ಷಿಯಾಗಿರುವ ವಾಸ್ತವವಾಗಿದೆ. ಪ್ರತಿದಿನ ರಾತ್ರಿ ನಾವಿದನ್ನು ನೋಡುತ್ತಿದ್ದೇವೆ. ಪ್ರತಿ ತಾಸು ಮತ್ತು ಕ್ಷಣಗಳಲ್ಲೂ ನಾವಿದನ್ನು ಅನುಭವಿಸುತ್ತಿದ್ದೇವೆ. ತನ್ನ ಆಯುಷ್ಯವು ಯಾವಾಗ ಕೊನೆಗೊಳ್ಳು

[1] ಅಲ್‌ಬುಖಾರೀ 6416

ವುದು ಮತ್ತು ತಾನು ಯಾವಾಗ ಮರಣಹೊಂದುವೆನೆಂದು ಮನುಷ್ಯನು ತಿಳಿದಿಲ್ಲವಾದ್ದರಿಂದ ಅವನು (ತನ್ನ ಕೊನೆಯ) ಪ್ರಯಾಣಕ್ಕಾಗಿ ಸಿದ್ಧತೆ ಮಾಡಿಕೊಳ್ಳುವುದು ಮತ್ತು ಒಬ್ಬ ದಾರಿಹೋಕನಂತೆ ಬದುಕುವುದು ಕಡ್ಡಾಯ ವಾಗಿದೆ. ಅವನು ಇಹಲೋಕಕ್ಕೆ ಮತ್ತು ಅದರಲ್ಲಿರುವುದಕ್ಕೆ ಅಂಟಿಕೊಳ್ಳಬಾರದು. ಅದನ್ನು ತನ್ನ ಸ್ವದೇಶವನ್ನಾಗಿ ಮಾಡಿಕೊಳ್ಳಬಾರದು. ತಾನು ಇಲ್ಲಿ ಶಾಶ್ವತವಾಗಿ ಉಳಿಯುವೆನೆಂದು ಅವನ ಮನಸ್ಸು ಅವನೊಂದಿಗೆ ಹೇಳಬಾರದು. ಒಬ್ಬ ಅಪರಿಚಿತನು ತನ್ನದಲ್ಲದ ದೇಶದಲ್ಲಿ, ಅಂದರೆ ಆ ದೇಶದಲ್ಲಿ ಅವನಿಗೆ ಎಷ್ಟೇ ನೆಮ್ಮದಿ ಮತ್ತು ಸವಲತ್ತು ಲಭ್ಯವಾದರೂ ತನ್ನ ಆವಶ್ಯಕತೆಯು ಮುಗಿದ ಬಳಿಕ ತಾನು ಬಿಟ್ಟುಹೋಗುವ ದೇಶದಲ್ಲಿ, ಬದುಕುವನಂತೆ ಇಹಲೋಕದಲ್ಲಿ ಬದುಕಬೇಕಾಗಿದೆ. ಒಬ್ಬ ಯಾತ್ರಿಕನು ತನ್ನ ಯಾತ್ರೆಯ ವೇಳೆಯಲ್ಲಿ ತನ್ನ ಉದ್ದೇಶವನ್ನು ಪೂರ್ತಿ ಮಾಡುವ ಮತ್ತು ತನ್ನ ಗುರಿಯನ್ನು ಸಾಕ್ಷಾತ್ಕರಿಸುವ ಕನಿಷ್ಠ ಆವಶ್ಯಕತೆಗಳನ್ನು ಮಾತ್ರ ಆಶಿಸುವಂತೆ ಅವನು ಇಹಲೋಕದಲ್ಲಿ ಬದುಕಬೇಕಾಗಿದೆ.

ಗೌರವಾನ್ವಿತ ಸಹಾಬಿವರ್ಯರಾದ ಅಬ್ದುಲ್ಲಾಹ್ ಇಬ್ನ್ ಉಮರ್(ﷺ)ರವರು ಪ್ರವಾದಿ(ﷺ)ರವರ ಉಪದೇಶದಿಂದ ಜ್ಞಾನ ಮತ್ತು ಕರ್ಮಕ್ಕೆ ಸಂಬಂಧಿಸಿದ ಎಲ್ಲವನ್ನೂ ಗ್ರಹಿಸಿಕೊಂಡಿದ್ದಾರೆ. ಈ ಉಪದೇಶದಿಂದ ಅವರು ಮೂರು ಪ್ರಧಾನ ವಿಷಯಗಳನ್ನು ತಿಳಿದುಕೊಂಡಿದ್ದಾರೆ:

ಒಂದು: "ನೀನು ಸಂಜೆಯನ್ನು ಪ್ರವೇಶಿಸಿದರೆ ಬೆಳಗನ್ನು ನಿರೀಕ್ಷಿಸದಿರು ಮತ್ತು ಬೆಳಗನ್ನು ಪ್ರವೇಶಿಸಿದರೆ ಸಂಜೆಯನ್ನು ನಿರೀಕ್ಷಿಸದಿರು." ಒಬ್ಬ ವಿಶ್ವಾಸಿಯು ಇಹಲೋಕದ ಬಗ್ಗೆಯಿರುವ ಆಸೆಗಳನ್ನು ಕುಗ್ಗಿಸಬೇಕೆಂದು ಇದು ಪ್ರೋತ್ಸಾಹಿಸು ತ್ತದೆ. ಸಂಜೆಯಾದರೆ ಬೆಳಗಾಗುವುದನ್ನು ನಿರೀಕ್ಷಿಸಬಾರದು ಮತ್ತು ಬೆಳಗಾದರೆ ಸಂಜೆಯಾಗುವುದನ್ನು ನಿರೀಕ್ಷಿಸಬಾರದು. ಬದಲಾಗಿ ತನ್ನ ಆಯುಷ್ಯವು ಅದಕ್ಕೆ ಮೊದಲೇ ಕೊನೆಗೊಳ್ಳಬಹುದೆಂದು ಅವನು ಭಾವಿಸಬೇಕು.

ಎರಡು: “ನೀನು ರೋಗಿಯಾಗುವುದಕ್ಕೆ ಮೊದಲು ನಿನ್ನ ಆರೋಗ್ಯದಿಂದ ಪ್ರಯೋಜನ ಪಡೆ.” ಅಂದರೆ ಒಬ್ಬ ವಿಶ್ವಾಸಿಯು ತಾನು ರೋಗಿಯಾಗುವುದಕ್ಕೆ ಮೊದಲು ತಾನು ಆರೋಗ್ಯದಲ್ಲಿರುವ ಸಮಯವನ್ನು ಸದುಪಯೋಗ ಪಡಿಸ ಬೇಕು. ಅಂದರೆ ರೋಗವು ತನ್ನ ಮತ್ತು ಯಾವುದರ ಮಧ್ಯೆ ಅಡ್ಡಗೋಡೆ ಯಾಗಿ ಬಂದು ಉಪವಾಸ, ನಮಾಝ್ ಮೊದಲಾದ ಕರ್ಮಗಳನ್ನು ಮಾಡುವುದರಿಂದ ತನ್ನನ್ನು ಅಶಕ್ತಗೊಳಿಸುವುದಕ್ಕೆ ಮೊದಲು ಆ ಸತ್ಕರ್ಮ ಗಳನ್ನು ಮಾಡುವುದನ್ನು ಮತ್ತು ಆಜ್ಞಾಪಾಲನೆಯನ್ನು ಹೆಚ್ಚಿಸುವುದನ್ನು ಮಾಡಬೇಕು.

ಮೂರು: “ನೀನು ಮರಣಹೊಂದುವುದಕ್ಕೆ ಮೊದಲು ನಿನ್ನ ಬದುಕಿನಿಂದ ಪ್ರಯೋಜನ ಪಡೆ.” ಅಂದರೆ ಒಬ್ಬ ವಿಶ್ವಾಸಿಯು ಪೂರ್ವಸಿದ್ಧತೆಯನ್ನು ಮುಂಚಿತವಾಗಿಯೇ ಮಾಡಿಕೊಳ್ಳುವ ಮೂಲಕ ಬದುಕಿನ ಸಮಯ ಸಂದರ್ಭಗಳನ್ನು ಸದುಪಯೋಗ ಪಡಿಸಬೇಕು. ಮರಣವು ತನ್ನ ಮತ್ತು ತನ್ನ ಸತ್ಕರ್ಮಗಳ ಮಧ್ಯೆ ಅಡ್ಡಗೋಡೆಯಾಗಿ ಬರುವ ತನಕ ಅವುಗಳನ್ನು ಮುಂದೂಡಬಾರದು.

عَنِ ابْنِ عَبَّاسٍ ﷺ قَالَ: قَالَ رَسُولُ اللَّهِ ﷺ: «نِعْمَتَانِ مَغْبُونٌ فِيهِمَا كَثِيرٌ مِنَ النَّاسِ، الصِّحَّةُ وَالْفَرَاغُ». [أخرجه البخاري]

**ಇಬ್ನ್ ಅಬ್ಬಾಸ್(ﷺ)ರಿಂದ ವರದಿ: ಅವರು ಹೇಳುತ್ತಾರೆ: ಅಲ್ಲಾಹನ ರಸೂಲ್ (ﷺ)ರವರು ಹೇಳಿದರು: “ಎರಡು ಅನುಗ್ರಹಗಳು; ಜನರಲ್ಲಿ ಹೆಚ್ಚಿನವರೂ ಅವುಗಳ ಬಗ್ಗೆ ವಂಚಿತರಾಗಿದ್ದಾರೆ. ಆರೋಗ್ಯ ಮತ್ತು ಬಿಡುವು.” [ಅಲ್‌ಬುಖಾರೀ]**[2]

2 ಅಲ್‌ಬುಖಾರೀ 6412

عَنِ ابْنِ عَبَّاسٍ ﷺ أَنَّ رَسُولَ اللَّهِ ﷺ قَالَ لِرَجُلٍ وَهُوَ يَعِظُهُ : «اغْتَنِمْ خَمْسًا قَبْلَ خَمْسٍ، شَبَابَكَ قَبْلَ هَرَمِكَ، وَصِحَّتَكَ قَبْلَ سَقَمِكَ، وَغِنَاكَ قَبْلَ فَقْرِكَ، وَفَرَاغَكَ قَبْلَ شُغْلِكَ، وَحَيَاتَكَ قَبْلَ مَوْتِكَ». [أخرجه الحاكم وصححه]

**ಇಬ್ನ್ ಅಬ್ಬಾಸ್(ﷺ)ರಿಂದ ವರದಿ: ಒಬ್ಬ ವ್ಯಕ್ತಿಗೆ ಉಪದೇಶ ಮಾಡುತ್ತಾ ಅಲ್ಲಾಹನ ರಸೂಲ್(ﷺ)ರವರು ಹೇಳಿದರು: "ಐದು ವಿಷಯಗಳಿಗೆ ಮುಂಚೆ ಐದು ವಿಷಯಗಳಿಂದ ಸದುಪಯೋಗ ಪಡೆದುಕೋ. ನಿನ್ನ ವೃದ್ಧಾಪ್ಯಕ್ಕೆ ಮುಂಚೆ ನಿನ್ನ ಯೌವನದಿಂದ, ನಿನ್ನ ರೋಗಕ್ಕೆ ಮುಂಚೆ ನಿನ್ನ ಆರೋಗ್ಯದಿಂದ, ನಿನ್ನ ಬಡತನಕ್ಕೆ ಮುಂಚೆ ನಿನ್ನ ಸಿರಿವಂತಿಕೆಯಿಂದ, ನಿನ್ನ ಕೆಲಸಕ್ಕಿಂತ ಮುಂಚೆ ನಿನ್ನ ಬಿಡುವಿನಿಂದ, ನಿನ್ನ ಮರಣಕ್ಕೆ ಮುಂಚೆ ನಿನ್ನ ಬದುಕಿನಿಂದ." [ಅಲ್‌ಹಾಕಿಮ್, ಅವರು ಇದನ್ನು ಸಹೀಹ್ ಎಂದಿದ್ದಾರೆ.]**[3]

ಆದ್ದರಿಂದ ಹೊಸ ವರ್ಷವನ್ನು ಸ್ವಾಗತಿಸುವ ಈ ಸಂದರ್ಭದಲ್ಲಿ ಸಮಯ ಗಳನ್ನು ಸದುಪಯೋಗಪಡಿಸುವುದು, ಕೆಲಸ, ರೋಗ ಅಥವಾ ಮರಣವು ನಮ್ಮ ಮತ್ತು ಸತ್ಕರ್ಮಗಳ ಮಧ್ಯೆ ಅಡ್ಡಗೋಡೆಯಾಗಿ ಬರುವುದಕ್ಕೆ ಮೊದಲು ಸತ್ಕರ್ಮವೆಸಗಲು ಧಾವಂತಪಡುವುದು ನಮ್ಮ ಮೇಲೆ ಕಡ್ಡಾಯವಾಗಿದೆ.

ಓ ಅಲ್ಲಾಹ್, ನಮ್ಮ ಉಳಿದ ಆಯುಷ್ಯವನ್ನು ಸದುಪಯೋಗಪಡಿಸಲು ನಮ್ಮ ಎಬ್ಬಿಸು. ಸತ್ಕರ್ಮಗಳನ್ನು ಹೆಚ್ಚು ಹೆಚ್ಚಾಗಿ ಮಾಡಲು ನಮಗೆ ಸೌಭಾಗ್ಯವನ್ನು ದಯಪಾಲಿಸು. ಓ ಅಲ್ಲಾಹ್, ಆಸೆಗಳ ನಿದ್ದೆಯಿಂದ ನಮ್ಮ ಹೃದಯಗಳನ್ನು ಎಬ್ಬಿಸು. ಪ್ರಯಾಣದ ಸಾಮೀಪ್ಯವನ್ನು ಮತ್ತು ಆಯುಷ್ಯದ ಮುಗಿಯುವಿಕೆ

[3] ಅಲ್‌ಮುಸ್ತದ್ರಕ್ (4/306). ಅಲ್‌ಬುಖಾರೀ ಮತ್ತು ಮುಸ್ಲಿಮ್‌ರ ಷರತ್ತುಗಳ ಪ್ರಕಾರ ಅವರು ಇದನ್ನು ಸಹೀಹ್ ಎಂದಿದ್ದಾರೆ. ಅದ್ದಹಬೀ ಇದನ್ನು ಒಪ್ಪಿಕೊಂಡಿದ್ದಾರೆ. ಅಲ್‌ಅಲ್ಬಾನೀ 'ಇಕ್ತಿದಾಉಲ್ ಇಲ್ಮಿಲ್ ಅಮಲ್' ಎಂಬ ಗ್ರಂಥದಲ್ಲಿ (ಪುಟ 100) ಇದನ್ನು ಸಹೀಹ್ ಎಂದಿದ್ದಾರೆ. ಇದಕ್ಕೆ ಉಮರ್ ಇಬ್ನ್ ಮೈಮೂನ್‌ರ ಹದೀಸ್ ಶಾಹಿದ್ ಆಗಿದೆ. ಇದನ್ನು ಇಬ್ನುಲ್ ಮುಬಾರಕ್ 'ಅಝ್ಝುಹ್ದ್'ನಲ್ಲಿ (ಸಂಖ್ಯೆ 2); ಅಬೂ ನುಐಮ್ 'ಅಲ್‌ಹಿಲ್ಯ'ದಲ್ಲಿ (4/148); ಅಲ್‌ಖತೀಬ್ 'ಅಲ್‌ಇಕ್ತಿದಾಅ್'ನಲ್ಲಿ (ಪುಟ 100–101) ವರದಿ ಮಾಡಿದ್ದಾರೆ. ಅಲ್‌ಅಲ್ಬಾನೀ ಹೇಳುತ್ತಾರೆ: "ಇದು ಮುರ್ಸಲ್ ಮತ್ತು ಹಸನ್ ಆಗಿರುವ ಸನದ್ ಆಗಿದೆ."

ಯನ್ನು ನಮಗೆ ನೆನಪಿಸಿಕೊಡು. ನಮ್ಮ ಹೃದಯಗಳನ್ನು ವಿಶ್ವಾಸದ ಮೇಲೆ ದೃಢಗೊಳಿಸು. ಸತ್ಕರ್ಮಗಳನ್ನು ಮಾಡುವ ಸೌಭಾಗ್ಯವನ್ನು ದಯಪಾಲಿಸು. ನಮಗೂ, ನಮ್ಮ ತಂದೆತಾಯಂದಿರಿಗೂ ಸರ್ವ ಮುಸ್ಲಿಮರಿಗೂ ಕ್ಷಮೆಯನ್ನು ನೀಡು.

وَصَلَّى اللَّهُ عَلَى نَبِيِّنَا مُحَمَّدٍ...

## ಮುಹರ್ರಮ್ ಎಂಬ ಅಲ್ಲಾಹನ ತಿಂಗಳ ಶ್ರೇಷ್ಠತೆ

عَنْ أَبِي هُرَيْرَةَ ﷺ قَالَ: قَالَ رَسُولُ اللَّهِ ﷺ: «أَفْضَلُ الصِّيَامِ بَعْدَ رَمَضَانَ شَهْرُ اللَّهِ الْمُحَرَّمُ، وَأَفْضَلُ الصَّلَاةِ بَعْدَ الْفَرِيضَةِ صَلَاةُ اللَّيْلِ» وَفِي رِوَايَةٍ: «الصَّلَاةُ فِي جَوْفِ اللَّيْلِ». [أَخْرَجَهُ مُسْلِمٌ]

**ಅಬೂ ಹುರೈರಾ(ﷺ)ರಿಂದ ವರದಿ: ಅವರು ಹೇಳುತ್ತಾರೆ: ಅಲ್ಲಾಹನ ರಸೂಲ್(ﷺ)ರವರು ಹೇಳಿದರು: 'ರಮದಾನ್ ತಿಂಗಳ ಉಪವಾಸದ ನಂತರ ಅತಿಶ್ರೇಷ್ಠವಾದ ಉಪವಾಸವು ಅಲ್ಲಾಹನ ತಿಂಗಳಾದ ಮುಹರ್ರಮ್ ತಿಂಗಳ ಉಪವಾಸವಾಗಿದೆ. ಕಡ್ಡಾಯ ನಮಾಝ್‌ಗಳ ನಂತರ ಅತಿಶ್ರೇಷ್ಠವಾದ ನಮಾಝ್ ರಾತ್ರಿಯಲ್ಲಿ ನಿರ್ವಹಿಸುವ ನಮಾಝ್ ಆಗಿದೆ.' ಇನ್ನೊಂದು ವರದಿಯಲ್ಲಿ: 'ರಾತ್ರಿಯ ಮಧ್ಯಭಾಗದಲ್ಲಿ ನಿರ್ವಹಿಸುವ ನಮಾಝ್.' " [ಮುಸ್ಲಿಮ್][4]**

ಅಲ್ಲಾಹನ ತಿಂಗಳಾದ ಮುಹರ್ರಮ್ ತಿಂಗಳಲ್ಲಿ ಉಪವಾಸ ಆಚರಿಸುವುದಕ್ಕೆ ಶ್ರೇಷ್ಠತೆಯಿದೆ ಮತ್ತು ಶ್ರೇಷ್ಠತೆಗೆ ಸಂಬಂಧಿಸಿದಂತೆ ಅದರ ಉಪವಾಸವು ರಮದಾನ್ ತಿಂಗಳ ಉಪವಾಸದ ನಂತರದ ಸ್ಥಾನವನ್ನು ಹೊಂದಿದೆ

[4] ಮುಸ್ಲಿಮ್ 1163

ಎಂಬುದಕ್ಕೆ ಈ ಹದೀಸಿನಲ್ಲಿ ಪುರಾವೆಯಿದೆ. ಈ ತಿಂಗಳಲ್ಲಿ ಉಪವಾಸ ಆಚರಿಸುವುದಕ್ಕೆ ಶ್ರೇಷ್ಠತೆಯು ಬಂದಿರುವುದು ಆ ಸಮಯದ ಶ್ರೇಷ್ಠತೆಯಿಂದ ಮತ್ತು ಅದರಲ್ಲಿರುವ ಅಪಾರವಾದ ಪ್ರತಿಫಲದ ಕಾರಣದಿಂದಾಗಿದೆ. ಯಾಕೆಂದರೆ ಅಲ್ಲಾಹನ ಬಳಿ ಸತ್ಕರ್ಮಗಳ ಪೈಕಿ ಅತಿಶ್ರೇಷ್ಠವಾದುದು ಉಪವಾಸವಾಗಿದೆ.

ಖಲೀಫಾ ಉಮರ್ ಇಬ್ನುಲ್ ಖತ್ತಾಬ್(ﷺ)ರವರ ಕಾಲದಲ್ಲಿ ಮುಸ್ಲಿಮರೆಲ್ಲರೂ ಒಮ್ಮತಾಭಿಪ್ರಾಯ ಹೊಂದಿರುವ ಪ್ರಕಾರ ಅಲ್ಲಾಹನ ತಿಂಗಳಾದ ಮುಹರ್ರಮ್ ತಿಂಗಳಿಂದ ಹಿಜರಿ ವರ್ಷವು ಆರಂಭವಾಗುತ್ತದೆ. ಅಲ್ಲಾಹು ಅವನ ಗ್ರಂಥದಲ್ಲಿ ಪವಿತ್ರವೆಂದು ಘೋಷಿಸಿದ ನಾಲ್ಕು ತಿಂಗಳುಗಳ ಪೈಕಿ ಮುಹರ್ರಮ್ ಒಂದಾಗಿದೆ. ಅಲ್ಲಾಹು ಹೇಳುತ್ತಾನೆ:

﴿ إِنَّ عِدَّةَ الشُّهُورِ عِنْدَ اللَّهِ اثْنَا عَشَرَ شَهْرًا فِي كِتَابِ اللَّهِ يَوْمَ خَلَقَ السَّمَاوَاتِ وَالْأَرْضَ مِنْهَا أَرْبَعَةٌ حُرُمٌ ذَلِكَ الدِّينُ الْقَيِّمُ ﴾

**"ಆಕಾಶಗಳನ್ನು ಮತ್ತು ಭೂಮಿಯನ್ನು ಸೃಷ್ಟಿಸಿದಂದಿನಿಂದ ಅಲ್ಲಾಹನ ಬಳಿ ಅವನ ಗ್ರಂಥದಲ್ಲಿರುವ ಪ್ರಕಾರ ತಿಂಗಳುಗಳ ಸಂಖ್ಯೆಯು ಹನ್ನೆರಡು ತಿಂಗಳುಗಳಾಗಿವೆ; ಅವುಗಳ ಪೈಕಿ ನಾಲ್ಕು ತಿಂಗಳುಗಳು ಪವಿತ್ರವಾಗಿವೆ. ಅದೇ ನೇರವಾದ ಧರ್ಮ." [ಕುರ್‌ಆನ್ 9:36]**

عَنْ أَبِي بَكْرَةَ ﷺ عَنِ النَّبِيِّ ﷺ قَالَ: «...السَّنَةُ اثْنَا عَشَرَ شَهْرًا، مِنْهَا أَرْبَعَةٌ حُرُمٌ، ثَلَاثَةٌ مُتَوَالِيَةٌ، ذُو الْقَعْدَةِ وَذُو الْحِجَّةِ وَالْمُحَرَّمُ وَرَجَبُ مُضَرَ- الَّذِي بَيْنَ جُمَادَى وَشَعْبَانَ».

**"ಅಬೂ ಬಕ್ರಃ(ﷺ)ರಿಂದ ವರದಿ: ಪ್ರವಾದಿ(ﷺ)ರವರಿಂದ: ಅವರು ಹೇಳಿದರು: 'ವರ್ಷವು ಹನ್ನೆರಡು ತಿಂಗಳುಗಳಾಗಿವೆ. ಅವುಗಳ ಪೈಕಿ ನಾಲ್ಕು ತಿಂಗಳುಗಳು ಪವಿತ್ರವಾಗಿವೆ. ಮೂರು ತಿಂಗಳುಗಳು ಒಂದರ ನಂತರ ಒಂದರಂತೆ ಬರುತ್ತವೆ.**

**ಅವು: ದುಲ್ ಕಅ್‌ದಃ, ದುಲ್ ಹಿಜ್ಜಃ, ಮುಹರ್ರಮ್ ಮತ್ತು ಜುಮಾದಾ ಹಾಗೂ ಶಅ್‌ಬಾನ್ ತಿಂಗಳುಗಳ ಮಧ್ಯೆ ಬರುವ ಮುದರ್ ಜನಾಂಗದವರ ರಜಬ್ ತಿಂಗಳು." [ಅಲ್‌ಬುಖಾರೀ ಮತ್ತು ಮುಸ್ಲಿಮ್]**[5]

ಈ ತಿಂಗಳನ್ನು ಅಲ್ಲಾಹು ತನ್ನ ಹೆಸರಿನೊಂದಿಗೆ ಸೇರಿಸಿಕೊಂಡಿರುವುದು ಅದಕ್ಕೆ ಗೌರವ ಮತ್ತು ಮಹತ್ವ ನೀಡುವುದಕ್ಕಾಗಿದೆ. ಯಾಕೆಂದರೆ ಅತಿವಿಶಿಷ್ಟವಾಗಿರುವುದರ ಹೊರತು ಬೇರೇನನ್ನೂ ಅವನು ಅವನ ಹೆಸರಿನೊಂದಿಗೆ ಸೇರಿಸುವುದಿಲ್ಲ. ಉದಾಹರಣೆಗೆ ಬೈತುಲ್ಲಾಹ್ (ಅಲ್ಲಾಹನ ಮನೆ); ರಸೂಲುಲ್ಲಾಹ್ (ಅಲ್ಲಾಹನ ರಸೂಲ್) ಇತ್ಯಾದಿ. ಈ ತಿಂಗಳಿಗೆ 'ಮುಹರ್ರಮ್' ಎಂದು ಹೆಸರಿಟ್ಟಿರುವುದು ಅದರ ಪಾವಿತ್ರ್ಯತೆಯನ್ನು ಒತ್ತಿ ಹೇಳುವುದಕ್ಕಾಗಿದೆ. ಯಾಕೆಂದರೆ ಅರಬರು ಒಂದು ವರ್ಷದಲ್ಲಿ ಈ ತಿಂಗಳನ್ನು ಪವಿತ್ರಗೊಳಿಸಿದರೆ ಇನ್ನೊಂದು ವರ್ಷದಲ್ಲಿ ಪವಿತ್ರಗೊಳಿಸುತ್ತಿರಲಿಲ್ಲ.

ಅಲ್ಲಾಹು ಹೇಳುತ್ತಾನೆ:

﴿ فَلَا تَظْلِمُوا فِيهِنَّ أَنْفُسَكُمْ ﴾

**"ಆದ್ದರಿಂದ ನೀವು ಅವುಗಳಲ್ಲಿ ಸ್ವತಃ ನಿಮ್ಮೊಂದಿಗೆ ಅನ್ಯಾಯವೆಸಗದಿರಿ." [ಕುರ್‌ಆನ್ 9:36]**

ಅಂದರೆ ಈ ಪವಿತ್ರ ತಿಂಗಳುಗಳಲ್ಲಿ ನೀವು ಸ್ವತಃ ನಿಮ್ಮೊಂದಿಗೆ ಅನ್ಯಾಯವೆಸಗದಿರಿ. ಯಾಕೆಂದರೆ ಈ ತಿಂಗಳುಗಳಲ್ಲಿ ಮಾಡುವ ಪಾಪವು ಇತರ ತಿಂಗಳುಗಳಲ್ಲಿ ಮಾಡುವ ಪಾಪಕ್ಕಿಂತಲೂ ಘೋರವಾಗಿದೆ.

ಕತಾದಃ ಹೇಳುತ್ತಾರೆ:

إِنَّ الظُّلْمَ فِي الْأَشْهُرِ الْحُرُمِ أَعْظَمُ خَطِيئَةً وَوِزْرًا مِنَ الظُّلْمِ فِيمَا سِوَاهَا، وَإِنْ كَانَ الظُّلْمُ عَلَى كُلِّ حَالٍ عَظِيمًا، وَلَكِنَّ اللَّهَ يُعَظِّمُ مِنْ أَمْرِهِ مَا يَشَاءُ.

[5] ಅಲ್‌ಬುಖಾರೀ 4662 ಮತ್ತು ಮುಸ್ಲಿಮ್ 1679

**"ಪಾಪ ಮತ್ತು ಹೊರೆಗೆ ಸಂಬಂಧಿಸಿದಂತೆ ಪವಿತ್ರ ತಿಂಗಳುಗಳಲ್ಲಿ ಮಾಡುವ ಅನ್ಯಾಯವು ಇತರ ತಿಂಗಳುಗಳಲ್ಲಿ ಮಾಡುವ ಅನ್ಯಾಯಕ್ಕಿಂತಲೂ ಘೋರ ವಾಗಿದೆ. ವಾಸ್ತವವಾಗಿ ಅನ್ಯಾಯವು ಎಲ್ಲ ಸಮಯಗಳಲ್ಲೂ ಘೋರವಾಗಿದ್ದರೂ ಅಲ್ಲಾಹು ಅವನ ಆಜ್ಞೆಯಿಂದಾಗಿ ಅವನು ಇಚ್ಛಿಸುವವುಗಳನ್ನು ಘೋರವಾಗಿ ಸುತ್ತಾನೆ."[6]**

ಅಲ್ಲಾಹು ಈ ಚಾಂದ್ರ ಮಾಸಗಳನ್ನು ಜನರು ಸಮಯವನ್ನು ಲೆಕ್ಕ ಮಾಡುವುದಕ್ಕಿರುವ ಒಂದು ಮಾನದಂಡವನ್ನಾಗಿ ಮಾಡಿದ್ದಾನೆ. ಯಾಕೆಂದರೆ ಇದು ಅನುಭವವಾಗುವ ಚಿಹ್ನೆಗಳಾಗಿವೆ. ಈ ಚಾಂದ್ರ ಮಾಸಗಳ ಆರಂಭ ಮತ್ತು ಅಂತ್ಯವನ್ನು ಜನರೆಲ್ಲರೂ ಅರಿಯುತ್ತಾರೆ. ಆದರೆ ಬೇಸರದ ಸಂಗತಿ ಯೇನೆಂದರೆ ಮುಸ್ಲಿಮರಲ್ಲಿ ಹೆಚ್ಚಿನವರೂ ಹಿಜರೀ ದಿನಾಂಕವನ್ನು ವರ್ಜಿಸಿ ಊಹನಾತ್ಮಕ ಆಧಾರದ ಮೇಲೆ ನಿರ್ಮಿಸಲಾಗಿರುವ ಮತ್ತು ಶರೀಅತ್ತಿನಲ್ಲೋ, ಬುದ್ಧಿಯಲ್ಲೋ, ಅನುಭವದಲ್ಲೋ ಯಾವುದೇ ಆಧಾರವನ್ನೂ ಹೊಂದಿಲ್ಲದ ಕ್ರಿಸ್ತ ದಿನಾಂಕವನ್ನು ಅವಲಂಬಿಸುತ್ತಿದ್ದಾರೆ.

ಇದು ಮುಸ್ಲಿಮೇತರರ ಮುಂದೆ ಬಲಹೀನರಾಗುವುದಕ್ಕಿರುವ, ಸೋಲನ್ನು ಒಪ್ಪಿಕೊಳ್ಳುವುದಕ್ಕಿರುವ ಮತ್ತು ಅವರನ್ನು ಅನುಸರಿಸುವುದಕ್ಕಿರುವ ಸೂಚನೆ ಯಾಗಿದೆ. ಇದರ ದುಷ್ಪರಿಣಾಮದಿಂದಾಗಿ ಮುಸ್ಲಿಮರು ತಮ್ಮನ್ನು ಮತ್ತು ತಮ್ಮ ಸಂತತಿಗಳನ್ನು ಕ್ರೈಸ್ತರ ದಿನಾಂಕದೊಂದಿಗೆ ಬಂಧಿಸಿ, ತಮ್ಮ ರಸೂಲರೊಂದಿಗೆ, ತಮ್ಮ ಧರ್ಮದ ಲಾಂಛನಗಳೊಂದಿಗೆ ಮತ್ತು ತಮ್ಮ ಇಬಾದತ್‌ಗಳೊಂದಿಗೆ ಸಂಬಂಧ ಹೊಂದಿರುವ ಹಿಜರೀ ದಿನಾಂಕದಿಂದ ದೂರ ಸರಿಯುತ್ತಿದ್ದಾರೆ. ಸಹಾಯ ಬೇಡಲಾಗುವವನು ಅಲ್ಲಾಹನಾಗಿದ್ದಾನೆ.

ರಮದಾನ್ ತಿಂಗಳ ನಂತರ ಐಚ್ಛಿಕ ಉಪವಾಸ ಆಚರಿಸುವುದಕ್ಕೆ ಅತಿಶ್ರೇಷವಾದ ಸಮಯವು ಅಲ್ಲಾಹನ ತಿಂಗಳಾದ ಮುಹರ್ರಮ್ ತಿಂಗಳಾಗಿದೆ ಎಂಬುದಕ್ಕೆ ಈ ಹದೀಸಿನಲ್ಲಿ ಪುರಾವೆಯಿದೆ. ಬಾಹ್ಯಾರ್ಥದ ಪ್ರಕಾರ ರಮದಾನ್

---

[6] ತಫ್ಸೀರ್ ಇಬ್ನ್ ಕಸೀರ್ 4/89–90

ತಿಂಗಳ ನಂತರ ಐಚ್ಛಿಕ ಉಪವಾಸಕ್ಕೆ ಈ ತಿಂಗಳು ಅತಿಶ್ರೇಷ್ಠ ತಿಂಗಳಾಗಿದೆ. ಆದರೆ ಈ ತಿಂಗಳ ಕೆಲವು ದಿನಗಳಲ್ಲಿ ಮಾತ್ರ ಉಪವಾಸ ಆಚರಿಸುವುದಾದರೆ ಇತರ ತಿಂಗಳುಗಳಲ್ಲಿರುವ ಕೆಲವು ದಿನಗಳು ಉದಾಹರಣೆಗೆ ಅರಫಃ ದಿನ, ಶವ್ವಾಲ್ ತಿಂಗಳ ಆರು ದಿನ ಇತ್ಯಾದಿ ಈ ತಿಂಗಳಿನ ದಿನಗಳಿಗಿಂತಲೂ ಶ್ರೇಷ್ಠವಾಗಬಹುದಾಗಿದೆ.

ಹದೀಸಿನ ಬಾಹ್ಯಾರ್ಥದ ಪ್ರಕಾರ ಶ್ರೇಷ್ಠವೆಂದು ಹೇಳಲಾಗಿರುವುದು ಈ ತಿಂಗಳು ಪೂರ್ತಿಯಾಗಿ ಉಪವಾಸ ಆಚರಿಸುವುದನ್ನಾಗಿದೆ. ಆದರೆ ಕೆಲವು ಉಲಮಾಗಳು ಹೇಳುವ ಪ್ರಕಾರ ಈ ತಿಂಗಳಲ್ಲಿ ಉಪವಾಸ ಆಚರಿಸುವುದನ್ನು ಹೆಚ್ಚಿಸಬೇಕಾಗಿದೆಯೇ ಹೊರತು ತಿಂಗಳು ಪೂರ್ತಿ ಉಪವಾಸ ಆಚರಿಸಬಾರದು. ಯಾಕೆಂದರೆ ಆಯಿಶಾ(﵂)ರವರು ಹೇಳುತ್ತಾರೆ:

...مَا رَأَيْتُ رَسُولَ اللَّهِ ﷺ اسْتَكْمَلَ صِيَامَ شَهْرٍ قَطُّ إِلَّا رَمَضَانَ، وَمَا رَأَيْتُهُ فِي شَهْرٍ أَكْثَرَ مِنْهُ صِيَامًا فِي شَعْبَانَ.

**"ಅಲ್ಲಾಹನ ರಸೂಲ್(ﷺ)ರವರು ರಮದಾನ್ ತಿಂಗಳ ಹೊರತು ಇತರ ತಿಂಗಳುಗಳಲ್ಲಿ ಪೂರ್ತಿಯಾಗಿ ಉಪವಾಸ ಆಚರಿಸಿದ್ದನ್ನು ನಾನು ಕಂಡಿಲ್ಲ. ಅವರು ಶಅ್‌ಬಾನ್ ತಿಂಗಳ ಹೊರತು ಇತರ ತಿಂಗಳುಗಳಲ್ಲಿ ಅತಿಹೆಚ್ಚು ಉಪವಾಸ ಆಚರಿಸಿದ್ದಾಗಿಯೂ ನಾನು ಕಂಡಿಲ್ಲ." [ಮುಸ್ಲಿಮ್]**[7]

ಓ ಅಲ್ಲಾಹ್, ಅಲಕ್ಷ್ಯದ ನಿದ್ದೆಯಿಂದ ನಮ್ಮನ್ನು ಎಬ್ಬಿಸು. ಪ್ರಯಾಣಕ್ಕೆ ಮುಂಚೆ ಸಿದ್ಧತೆ ಮಾಡಿಕೊಳ್ಳುವ ಸೌಭಾಗ್ಯವನ್ನು ದಯಪಾಲಿಸು. ನಿಯಮಿತವಾಗಿಯುವ ಸಮಯದ ಸದುಪಯೋಗ ಮಾಡಲು ನಮ್ಮನ್ನು ಪ್ರೇರೇಪಿಸು. ಸತ್ಕರ್ಮಗಳನ್ನು ಮಾಡುವ, ದುಷ್ಕರ್ಮಗಳನ್ನು ತೊರೆಯುವ ಸೌಭಾಗ್ಯವನ್ನು ದಯಪಾಲಿಸು.

وَصَلَّى اللَّهُ عَلَى نَبِيِّنَا مُحَمَّدٍ ...

---

[7] ಮುಸ್ಲಿಮ್ 1156

## ಚರಿತ್ರೆಯ ಪ್ರಕಾರ ಆಶೂರಾ ದಿನ

عَنْ عَائِشَةَ ﷺ قَالَتْ: كَانَ يَوْمُ عَاشُورَاءَ تَصُومُهُ قُرَيْشٌ فِي الْجَاهِلِيَّةِ، وَكَانَ رَسُولُ اللَّهِ ﷺ يَصُومُهُ فِي الْجَاهِلِيَّةِ، فَلَمَّا قَدِمَ الْمَدِينَةَ صَامَهُ وَأَمَرَ بِصِيَامِهِ، فَلَمَّا فُرِضَ رَمَضَانُ تَرَكَ يَوْمَ عَاشُورَاءَ، فَمَنْ شَاءَ صَامَهُ وَمَنْ شَاءَ تَرَكَهُ. [أَخْرَجَهُ الْبُخَارِيُّ وَمُسْلِمٌ]

**"ಆಯಿಶಾ(ﷺ)ರಿಂದ ವರದಿ: ಅವರು ಹೇಳುತ್ತಾರೆ: ಜಾಹಿಲೀ ಕಾಲದಲ್ಲಿ ಕುರೈಶರು ಆಶೂರಾ ದಿನದಲ್ಲಿ ಉಪವಾಸ ಆಚರಿಸುತ್ತಿದ್ದರು. ಪ್ರವಾದಿ(ﷺ)ರವರು ಕೂಡ ಜಾಹಿಲೀ ಕಾಲದಲ್ಲಿ ಆ ದಿನದಲ್ಲಿ ಉಪವಾಸ ಆಚರಿಸುತ್ತಿದ್ದರು. ಆದರೆ ಮದೀನಕ್ಕೆ ಆಗಮಿಸಿದಾಗ ಅವರು ಆ ದಿನದಲ್ಲಿ ಉಪವಾಸ ಆಚರಿಸುವಂತೆ ಆಜ್ಞಾಪಿಸಿದರು. ರಮದಾನ್ ತಿಂಗಳ ಉಪವಾಸವು ಕಡ್ಡಾಯವಾದಾಗ ಅವರು ಆಶೂರಾ ದಿನವನ್ನು ತೊರೆದರು. ಆದ್ದರಿಂದ ಉಪವಾಸ ಆಚರಿಸುವ ಇಚ್ಛೆಯುಳ್ಳವರು ಆ ದಿನದಂದು ಉಪವಾಸ ಆಚರಿಸುತ್ತಿದ್ದರು ಮತ್ತು ಉಪವಾಸ ಆಚರಿಸದಿರುವ ಇಚ್ಛೆಯುಳ್ಳವರು ಅದನ್ನು ತೊರೆಯುತ್ತಿದ್ದರು." [ಅಲ್‌ಬುಖಾರೀ ಮುಸ್ಲಿಮ್]**[8]

ಜಾಹಿಲೀ ಕಾಲದ ಜನರು ಆಶೂರಾ ದಿನವನ್ನು ಅರಿತಿದ್ದರು; ಅದು ಅವರ ನಡುವೆ ಪ್ರಸಿದ್ಧಿಯನ್ನು ಪಡೆದಿತ್ತು ಮತ್ತು ಅವರು ಅಂದು ಉಪವಾಸ ಆಚರಿಸುತ್ತಿದ್ದರೆಂದು ಈ ಹದೀಸ್ ಸೂಚಿಸುತ್ತದೆ. ಪ್ರವಾದಿ(ﷺ)ರವರು ಕೂಡ ಆ ದಿನದಲ್ಲಿ ಉಪವಾಸ ಆಚರಿಸುತ್ತಿದ್ದರು. ಹಿಜ್ರಾ ಮಾಡುವ ತನಕ ಅವರು ಆ ದಿನದಲ್ಲಿ ಉಪವಾಸ ಆಚರಿಸುತ್ತಲೇ ಇದ್ದರು. ಆದರೆ ಅವರು ಆ ದಿನದಲ್ಲಿ ಉಪವಾಸ ಆಚರಿಸುವಂತೆ ಜನರಿಗೆ ಆಜ್ಞಾಪಿಸಿರಲಿಲ್ಲ. ಜಾಹಿಲೀ ಕಾಲದಲ್ಲಿ ಮತ್ತು ಪ್ರವಾದಿತ್ವಕ್ಕೆ ಮುಂಚೆ ಅರಬರ ಬಳಿ ಈ ದಿನಕ್ಕೆ ಪಾವಿತ್ರ್ಯವೂ, ದೊಡ್ಡ

[8] ಅಲ್‌ಬುಖಾರೀ 2002 ಮುಸ್ಲಿಮ್ 1125

ಸ್ಥಾನಮಾನವೂ ಇತ್ತೆಂಬುದನ್ನು ಇದು ಸೂಚಿಸುತ್ತದೆ. ಈ ಕಾರಣದಿಂದಲೇ ಅವರು ಆ ದಿನದಲ್ಲೇ ಕಅ್‌ಬಾಲಯಕ್ಕೆ ಬಟ್ಟೆಯನ್ನು ಹೊದಿಸುತ್ತಿದ್ದರು. ಆಯಿಶಾ(ﷺ)ರವರ ಹದೀಸಿನಲ್ಲಿ ಇದನ್ನು ಪ್ರಸ್ತಾಪಿಸಲಾಗಿದೆ.

كَانُوا يَصُومُونَ عَاشُورَاءَ قَبْلَ أَنْ يُفْرَضَ رَمَضَانُ، وَكَانَ يَوْمًا تُسْتَرُ فِيهِ الْكَعْبَةُ ...

**"ರಮದಾನ್ ಉಪವಾಸವು ಕಡ್ಡಾಯವಾಗುವುದಕ್ಕೆ ಮೊದಲು ಅವರು ಆಶೂರಾ ದಿನದಂದು ಉಪವಾಸ ಆಚರಿಸುತ್ತಿದ್ದರು. ಅದು ಕಅ್‌ಬಾಲಯವನ್ನು ಮರೆ ಮಾಚುವ (ಅದಕ್ಕೆ ಬಟ್ಟೆಯನ್ನು ಹೊದಿಯುವ) ದಿನವಾಗಿತ್ತು." [ಅಲ್‌ಬುಖಾರೀ][9]**

ಅಲ್‌ಕುರ್ತುಬೀ ಹೇಳುತ್ತಾರೆ:

حَدِيثُ عَائِشَةَ يَدُلُّ عَلَى أَنَّ صَوْمَ هَذَا الْيَوْمِ كَانَ عِنْدَهُمْ مَعْلُومُ الْمَشْرُوعِيَّةِ وَالْقَدَرِ، وَلَعَلَّهُمْ كَانُوا يَسْتَنِدُونَ فِي صَوْمِهِ إِلَى أَنَّهُ مِنْ شَرِيعَةِ إِبْرَاهِيمَ وَإِسْمَاعِيلَ صَلَوَاتُ اللَّهِ وَسَلَامُهُ عَلَيْهِمَا، فَإِنَّهُمْ كَانُوا يَنْتَسِبُونَ إِلَيْهِمَا، وَيَسْتَنِدُونَ فِي كَثِيرٍ مِنْ أَحْكَامِ الْحَجِّ وَغَيْرِهِ إِلَيْهِمَا...

**"ಈ ದಿನದ (ಆಶೂರಾ ದಿನದ) ಉಪವಾಸವು ಧರ್ಮದಲ್ಲಿ ಒಳಪಟ್ಟದ್ದಾಗಿದೆ ಮತ್ತು ಮಹತ್ವವುಳ್ಳದ್ದಾಗಿದೆಯೆಂಬ ಅರಿವು ಅವರಿಗೆ (ಜಾಹಿಲೀ ಕಾಲದ ಜನರಿಗೆ) ಇತ್ತೆಂಬುದನ್ನು ಆಯಿಶಾ(ﷺ)ರವರ ಹದೀಸ್ ಸೂಚಿಸುತ್ತದೆ. ಬಹುಶಃ ಆ ದಿನದಲ್ಲಿ ಉಪವಾಸ ಆಚರಿಸುವುದು ಇಬ್ರಾಹೀಮ್(ﷺ) ಮತ್ತು ಇಸ್ಮಾಈಲ್ (ﷺ)ರವರ ಶರೀಅತ್‌ನಲ್ಲಿ ಒಳಪಟ್ಟಿದೆ ಎಂಬ ಆಧಾರದಿಂದ ಅವರು ಅಂದು ಉಪವಾಸ ಆಚರಿಸುತ್ತಿದ್ದಿರಬಹುದು. ಯಾಕೆಂದರೆ ಅವರು ತಮ್ಮನ್ನು ಅವರಿಬ್ಬರಿಗೆ**

[9] ಅಲ್‌ಬುಖಾರೀ 1952

**ಸೇರಿಸಿ ಹೇಳುತ್ತಿದ್ದರು ಮತ್ತು ಹಜ್ಜ್ ಕರ್ಮದ ನಿಯಮಗಳು ಮೊದಲಾದ ಅನೇಕ ವಿಷಯಗಳಲ್ಲಿ ಅವರು ಅವರಿಬ್ಬರ ಶರೀಅತ್ತನ್ನು ಆಧರಿಸುತ್ತಿದ್ದರು."[10]**

ಪ್ರವಾದಿ(ﷺ)ರವರು ಮದೀನಕ್ಕೆ ಹಿಜ್ರಾ ಮಾಡಿದ ಬಳಿಕ ಆರಂಭ ಕಾಲದಲ್ಲಿ ಆಶೂರಾ ದಿನ ಉಪವಾಸ ಆಚರಿಸುವುದು ಕಡ್ಡಾಯವಾಗಿತ್ತು ಎಂಬುದನ್ನು ಈ ಎಲ್ಲ ಪುರಾವೆಗಳೂ ಸೂಚಿಸುತ್ತವೆ. ಇದು ಉಲಮಾಗಳ ಎರಡಭಿಪ್ರಾಯಗಳ ಪೈಕಿ ಪ್ರಬಲವಾದ ಅಭಿಪ್ರಾಯವಾಗಿದೆ.[11] ಯಾಕೆಂದರೆ ಅಂದು ಉಪವಾಸ ಆಚರಿಸಬೇಕೆಂಬ ಆಜ್ಞೆಯು ದೃಢಪಟ್ಟಿದೆ.

ಸಲಮಃ ಇಬ್ನುಲ್ ಅಕ್ವಅ್(ﷺ)ರವರು ಹೇಳುತ್ತಾರೆ:

أَمَرَ النَّبِيُّ ﷺ رَجُلًا مِنْ أَسْلَمَ أَنْ أَذِّنْ فِي النَّاسِ: أَنَّ مَنْ كَانَ أَكَلَ فَلْيَصُمْ بَقِيَّةَ يَوْمِهِ، وَمَنْ لَمْ يَكُنْ أَكَلَ فَلْيَصُمْ، فَإِنَّ الْيَوْمَ يَوْمُ عَاشُورَاءَ.

**"ಯಾರಾದರೂ ಈಗಾಗಲೇ ಆಹಾರ ಸೇವಿಸಿದ್ದರೆ ಅವರು ದಿನದ ಉಳಿದ ಭಾಗದಲ್ಲಿ ಉಪವಾಸ ಆಚರಿಸಲಿ ಮತ್ತು ಯಾರಾದರೂ ಇನ್ನೂ ಆಹಾರ ಸೇವಿಸದಿದ್ದರೆ ಅವರು ಉಪವಾಸ ಆಚರಿಸಲಿ; ಯಾಕೆಂದರೆ ಇಂದಿನ ದಿನವು ಆಶೂರಾ ದಿನವಾಗಿದೆ ಎಂದು ಜನರಿಗೆ ಸಾರುವಂತೆ ಪ್ರವಾದಿ(ﷺ)ರವರು ಅಸ್ಲಮ್ ಜನಾಂಗದ ಒಬ್ಬ ವ್ಯಕ್ತಿಗೆ ಆಜ್ಞಾಪಿಸಿದರು." [ಅಲ್‌ಬುಖಾರೀ ಮುಸ್ಲಿಮ್]** [12]

ಹಿಜ್ರಾ ಎರಡನೇ ವರ್ಷದಲ್ಲಿ ರಮದಾನ್ ತಿಂಗಳ ಉಪವಾಸವನ್ನು ಕಡ್ಡಾಯಗೊಳಿಸಲ್ಪಟ್ಟಾಗ ಆಶೂರಾ ದಿನದಂದು ಉಪವಾಸ ಆಚರಿಸುವುದು ಕಡ್ಡಾಯವಾಗಿದೆಯೆಂಬ ನಿಯಮವನ್ನು ರದ್ದುಪಡಿಸಿ ಅದನ್ನು ಪ್ರೋತ್ಸಾಹನೀಯ

[10] ಅಲ್‌ಮುಫ್‌ಹಮ್ 3/190

[11] ಅಲ್‌ಫತಾವಾ 25/311

[12] ಅಲ್‌ಬುಖಾರೀ 2007 ಮುಸ್ಲಿಮ್ 1135. ಅಲ್‌ಬುಖಾರೀ (1960) ಮತ್ತು ಮುಸ್ಲಿಮ್ (1136)ನಲ್ಲಿರುವ ರುಬಯ್ಯಿಅ್ ಬಿನ್ತ್ ಮುಅವ್ವಿದ್‌ರವರ ಹದೀಸ್ ಇದಕ್ಕೆ ಶಾಹಿದ್ ಆಗಿದೆ. ಅಹ್ಮದ್‌ನಲ್ಲಿ ಇದಕ್ಕೆ ಇತರ ಕೆಲವು ಶಾಹಿದ್ ಹದೀಸ್‌ಗಳಿವೆ.

ಗೊಳಿಸಲಾಯಿತು. ಆಶೂರಾ ಉಪವಾಸವು ಕಡ್ಡಾಯವೆಂದು ಆಜ್ಞಾಪಿಸಲಾಗಿದ್ದು ಹಿಜ್ರಾ ಒಂದನೇ ವರ್ಷದಲ್ಲಾಗಿತ್ತು. ಹಿಜ್ರಾ ಎರಡನೇ ವರ್ಷದ ಆರಂಭದಲ್ಲಿ ಆಶೂರಾ ದಿನದ ಉಪವಾಸವು ಕಡ್ಡಾಯವಾಗಿತ್ತು. ಆದರೆ ಅದೇ ವರ್ಷದಲ್ಲಿ ರಮದಾನ್ ತಿಂಗಳ ಉಪವಾಸವನ್ನು ಕೂಡ ಕಡ್ಡಾಯಗೊಳಿಸಲಾಯಿತು. ನಂತರ ಪ್ರವಾದಿ(ﷺ)ರವರು ತಮ್ಮ ಜೀವನದ ಕೊನೆಯ ವರ್ಷದಲ್ಲಿ, ಅಂದರೆ ಹಿಜ್ರಾ ಹತ್ತನೇ ವರ್ಷದಲ್ಲಿ ಆಶೂರಾ ದಿನದೊಂದಿಗೆ ಮುಹರ್ರಮ್ ತಿಂಗಳ ಒಂಬತ್ತನೇ ದಿನದಲ್ಲಿ ಕೂಡ ಉಪವಾಸ ಆಚರಿಸುವ ದೃಢ ನಿರ್ಧಾರ ಕೈಗೊಂಡರು. ಇದು ಯಹೂದ ಕ್ರೈಸ್ತರಿಗೆ ವಿರುದ್ಧವಾಗಿ ಸಾಗುವ ಉದ್ದೇಶದಿಂದಾಗಿತ್ತು. ಇದರ ಬಗ್ಗೆ ಮುಂದೆ ವಿವರಿಸಲಾಗುವುದು. ಇನ್‌ಶಾ ಅಲ್ಲಾಹ್.

ಓ ಅಲ್ಲಾಹ್, ಯಾರಿಗೆ ಆಜ್ಞೋಲ್ಲಂಘನೆಯು ನಷ್ಟವನ್ನುಂಟು ಮಾಡದೋ ಮತ್ತು ಆಜ್ಞಾಪಾಲನೆಯು ಪ್ರಯೋಜನಕರವಾಗದೋ ಅಂತಹ ಅಲ್ಲಾಹನೇ, ನಿನ್ನ ಕಡೆಗೆ ಪಶ್ಚಾತ್ತಾಪದೊಂದಿಗೆ ಮರಳುವ ಸೌಭಾಗ್ಯವನ್ನು ದಯಪಾಲಿಸು. ಓ ನಮ್ಮ ರಕ್ಷಕನೇ, ನಮ್ಮನ್ನು ಅಲಕ್ಷ್ಯದ ನಿದ್ದೆಯಿಂದ ಎಬ್ಬಿಸು. ನಿಯಮಿತವಾಗಿರುವ ಸಮಯಗಳ ಸದುಪಯೋಗಪಡೆಯುವಂತೆ ಎಚ್ಚರಿಸು. ಓ ಅಲ್ಲಾಹ್, ನಿನ್ನ ಮೇಲೆ ಭರವಸೆಯಿಟ್ಟು ನೀನು ಸಾಕುಗೊಳಿಸಿದವರಲ್ಲಿ, ನಿನ್ನೊಂದಿಗೆ ಮಾರ್ಗದರ್ಶನ ಬೇಡಿ ನೀನು ಮಾರ್ಗದರ್ಶನ ನೀಡಿದವರಲ್ಲಿ, ನಿನ್ನೊಂದಿಗೆ ಸಹಾಯವನ್ನು ಬೇಡಿ ನೀನು ಸಹಾಯ ನೀಡಿದವರಲ್ಲಿ, ನಿನಗೆ ವಿಧೇಯತೆ ತೋರಿದ ಕಾರಣ ನೀನು ಕರುಣೆ ತೋರಿದವರಲ್ಲಿ ಸೇರಿಸು.

وَصَلَّ اللَّهُ عَلَى نَبِيِّنَا مُحَمَّدٍ ...

# ಆಶೂರಾ ದಿನದಂದು ಉಪವಾಸ ಆಚರಿಸುವುದಕ್ಕಿರುವ ಪ್ರೋತ್ಸಾಹ

عَنْ أَبِي قَتَادَةَ ﷺ أَنَّ رَسُولَ اللَّهِ ﷺ سُئِلَ عَنْ صَوْمِ يَوْمِ عَاشُورَاءَ، فَقَالَ: «يُكَفِّرُ السَّنَةَ الْمَاضِيَةَ» وَفِي رِوَايَةٍ: «...وَصِيَامُ يَوْمِ عَاشُورَاءَ أَحْتَسِبُ عَلَى اللَّهِ أَنْ يُكَفِّرَ السَّنَةَ الَّتِي قَبْلَهُ». [أَخْرَجَهُ مُسْلِمٌ]

**"ಅಬೂ ಕತಾದಃ(ﷺ)ರಿಂದ ವರದಿ: ಆಶೂರಾ ದಿನದ ಉಪವಾಸದ ಬಗ್ಗೆ ಪ್ರವಾದಿ(ﷺ)ರವರೊಂದಿಗೆ ಪ್ರಶ್ನಿಸಲಾದಾಗ ಅವರು ಹೇಳಿದರು: 'ಅದು ಗತ ವರ್ಷದ ಪಾಪಗಳನ್ನು ಅಳಿಸಿ ಹಾಕುತ್ತದೆ.' ಇನ್ನೊಂದು ವರದಿಯಲ್ಲಿ: 'ಆಶೂರಾ ದಿನದ ಉಪವಾಸ; ಕಳೆದ ವರ್ಷದ ಪಾಪಗಳನ್ನು ಅಲ್ಲಾಹು ಅಳಿಸಿ ಹಾಕುವನೆಂದು ನಾನು ಭಾವಿಸುತ್ತೇನೆ.' " [ಮುಸ್ಲಿಮ್]** [13]

ಆಶೂರಾ ದಿನದ ಉಪವಾಸದ ಶ್ರೇಷ್ಠತೆಯೆಡೆಗೆ ಈ ಹದೀಸ್ ಸೂಚನೆ ನೀಡುತ್ತದೆ. ಉಲಮಾಗಳ ಪ್ರಬಲವಾದ ಮತ್ತು ಪ್ರಸಿದ್ಧವಾದ ಅಭಿಪ್ರಾಯ ಪ್ರಕಾರ ಆಶೂರಾ ದಿನವು ಮುಹರ್ರಮ್ ತಿಂಗಳ ಹತ್ತನೇ ದಿನವಾಗಿದೆ.

عَنِ ابْنِ عَبَّاسٍ ﷺ أَنَّهُ سُئِلَ عَنْ صِيَامِ يَوْمِ عَاشُورَاءَ فَقَالَ مَا عَلِمْتُ أَنَّ رَسُولَ اللَّهِ ﷺ صَامَ يَوْمًا يَطْلُبُ فَضْلَهُ عَلَى الْأَيَّامِ إِلَّا هَذَا الْيَوْمَ وَلَا شَهْرًا إِلَّا هَذَا الشَّهْرَ يَعْنِي رَمَضَانَ.

**"ಇಬ್ನ್ ಅಬ್ಬಾಸ್(ﷺ)ರಿಂದ ವರದಿ: ಆಶೂರಾ ದಿನದ ಉಪವಾಸದ ಬಗ್ಗೆ ಅವರೊಂದಿಗೆ ಕೇಳಲಾದಾಗ ಅವರು ಹೇಳಿದರು: 'ದಿನಗಳ ಪೈಕಿ ಯಾವುದಾ**

---

[13] ಮುಸ್ಲಿಮ್ 1162

**ದರೂ ಒಂದು ದಿನದ ಶ್ರೇಷ್ಠತೆಯನ್ನು ಅರಸುತ್ತಾ ಅಲ್ಲಾಹನ ರಸೂಲ್(ﷺ)ರವರು ಉಪವಾಸ ಆಚರಿಸಿಯೇ ಇಲ್ಲ; ಆದರೆ ಈ ದಿನದ (ಆಶೂರಾ ದಿನದ) ಹೊರತು ಮತ್ತು ತಿಂಗಳ ಪೈಕಿ ಯಾವುದಾದರೂ ಒಂದು ತಿಂಗಳ ಶ್ರೇಷ್ಠತೆಯನ್ನು ಅರಸುತ್ತಾ ಪ್ರವಾದಿ(ﷺ)ರವರು ಉಪವಾಸ ಆಚರಿಸಿಯೇ ಇಲ್ಲ; ಆದರೆ ಈ ತಿಂಗಳ ಅಂದರೆ ರಮದಾನ್ ತಿಂಗಳ ಹೊರತು.' " [ಅಲ್‌ಬುಖಾರೀ ಮುಸ್ಲಿಮ್]** [14]

ಆದ್ದರಿಂದ ಈ ಶ್ರೇಷ್ಠತೆಯನ್ನು ಪಡೆಯುವುದಕ್ಕಾಗಿ ಮತ್ತು ಪ್ರವಾದಿ(ﷺ)ರವರ ಅನುಸರಣೆಯಾಗಿ ಮುಸ್ಲಿಮರು ಈ ದಿನದಲ್ಲಿ ಉಪವಾಸ ಆಚರಿಸಬೇಕಾಗಿದೆ ಮತ್ತು ಅಂದು ಉಪವಾಸ ಆಚರಿಸುವಂತೆ ತಮ್ಮ ಕುಟುಂಬ ಮತ್ತು ಸಂತತಿಗಳಿಗೆ ಪ್ರೋತ್ಸಾಹ ನೀಡಬೇಕಾಗಿದೆ.

عَنْ جَابِرِ بْنِ سَمُرَةَ ﷺ قَالَ: كَانَ رَسُولُ اللَّهِ ﷺ يَأْمُرُ بِصِيَامِ يَـوْمِ عَاشُـورَاءَ وَيَحُثُّنَـا عَلَيْهِ وَيَتَعَاهَدُنَا عَلَيْهِ...

**"ಜಾಬಿರ್ ಇಬ್ನ್ ಸಮುರಃ(ﷺ)ರಿಂದ ವರದಿ: ಅವರು ಹೇಳುತ್ತಾರೆ: ಆಶೂರಾ ದಿನದಂದು ಉಪವಾಸ ಆಚರಿಸುವಂತೆ ಪ್ರವಾದಿ(ﷺ)ರವರು ನಮಗೆ ಆದೇಶಿಸುತ್ತಿದ್ದರು ಮತ್ತು ಪ್ರೋತ್ಸಾಹಿ ಸುತ್ತಿದ್ದರು; ಹಾಗೂ ಅಂದು ನಾವು ಉಪವಾಸ ಆಚರಿಸುವಂತೆ ಅವರು ನೋಡಿಕೊಳ್ಳುತ್ತಿದ್ದರು." [ಮುಸ್ಲಿಮ್]** [15]

ಅಲ್ಲಾಹನ ಬಳಿ ಸತ್ಕರ್ಮಗಳ ಪೈಕಿ ಶ್ರೇಷ್ಠವಾದುದು ಉಪವಾಸವಾಗಿದೆ. ಐಚ್ಛಿಕ ಉಪವಾಸದ ಪ್ರಯೋಜನವೇನೆಂದರೆ, ಅದಕ್ಕೆ ಲಭ್ಯವಾಗುವ ಪ್ರತಿಫಲದ ಹೊರತಾಗಿಯೂ ಅದು ಇತರ ಐಚ್ಛಿಕ ಕರ್ಮಗಳಂತೆ ಕಡ್ಡಾಯ ಕರ್ಮಗಳಲ್ಲಿರುವ ನ್ಯೂನತೆ ಮತ್ತು ಕೊರತೆಗಳನ್ನು ಪೂರ್ಣಗೊಳಿಸುತ್ತದೆ. ನಮಾಝ್‌ನ ಬಗ್ಗೆ ಪ್ರವಾದಿ(ﷺ)ರವರು ಹೇಳುತ್ತಾರೆ:

---

[14] ಅಲ್‌ಬುಖಾರೀ 2006 ಮುಸ್ಲಿಮ್ 1132

[15] ಮುಸ್ಲಿಮ್ 1128

«قَالَ الرَّبُّ تَبَارَكَ وَتَعَالَى: انْظُرُوا هَلْ لِعَبْدِي مِنْ تَطَوُّعٍ؟ فَيُكَمَّلَ بِهَا مَا انْتَقَصَ مِنَ الْفَرِيضَةِ، ثُمَّ يَكُونُ سَائِرُ عَمَلِهِ كَذَلِكَ».

**"ಅಲ್ಲಾಹು ಹೇಳುತ್ತಾನೆ: ನನ್ನ ದಾಸನ ಬಳಿ ಯಾವುದಾದರೂ ಐಚ್ಛಿಕ ನಮಾಝ್ ಇದೆಯೇ ಎಂದು ನೋಡಿರಿ. ಕಡ್ಡಾಯ ನಮಾಝ್‌ಗಳಲ್ಲಿ ಆತ ಮಾಡಿದ ಅಪೂರ್ಣತೆಗಳನ್ನು ಅದರಿಂದ ಪೂರ್ಣಗೊಳಿಸುವುದಕ್ಕಾಗಿ. ನಂತರ ಅವನ ಇತರೆಲ್ಲ ಕರ್ಮಗಳೂ ಹಾಗೆಯೇ ಆಗುವುದಕ್ಕಾಗಿ." [ಅತ್ತಿರ್ಮಿದೀ]** [16]

ಅದೇ ರೀತಿ ಐಚ್ಛಿಕ ಉಪವಾಸವು ಅಲ್ಲಾಹನ ಸಾಮೀಪ್ಯ ಪಡೆಯುವುದಕ್ಕಿರುವ ಪದವಿಗಳನ್ನು ಏರಲು ಮತ್ತು ಅಲ್ಲಾಹನ ಪ್ರೀತಿಯನ್ನು ಸಂಪಾದಿಸಲು ಮುಸ್ಲಿಮನನ್ನು ಸಿದ್ಧಗೊಳಿಸುತ್ತದೆ. ಕುದ್ಸೀ ಹದೀಸೊಂದರಲ್ಲಿ ಹೀಗಿದೆ:

«مَا تَقَرَّبَ إِلَيَّ عَبْدِي بِأَفْضَلَ مِمَّا افْتَرَضْتُهُ عَلَيْهِ، وَلَا يَزَالُ عَبْدِي يَتَقَرَّبُ إِلَيَّ بِالنَّوَافِلِ حَتَّى أُحِبَّهُ... »

**"ನಾನು ನನ್ನ ದಾಸನ ಮೇಲೆ ಕಡ್ಡಾಯಗೊಳಿಸಿರುವ ಕಾರ್ಯಗಳನ್ನು ನಿರ್ವಹಿಸುವ ಮೂಲಕವಲ್ಲದೆ ಇತರ ಯಾವುದೇ ಶ್ರೇಷ್ಠ ಕಾರ್ಯಗಳ ಮೂಲಕವೂ ಅವನು ನನಗೆ ಸಮೀಪವಾಗಲಾರನು. ನಾನು ನನ್ನ ದಾಸನನ್ನು ಪ್ರೀತಿಸುವ ತನಕ ಅವನು ಐಚ್ಛಿಕ ಕರ್ಮಗಳನ್ನು ನಿರ್ವಹಿಸುತ್ತಾ ನನಗೆ ಹತ್ತಿರವಾಗುತ್ತಲೇ ಇರುವನು..." [ಅಲ್‌ಬುಖಾರೀ]** [17]

ಅರಿತುಕೊಳ್ಳಿರಿ! ವುದೂ, ರಮದಾನ್ ತಿಂಗಳ ಉಪವಾಸ, ಅರಫಾ ದಿನದ ಉಪವಾಸ, ಆಶೂರಾ ದಿನದ ಉಪವಾಸ ಮೊದಲಾದ ಸತ್ಕರ್ಮಗಳನ್ನು

---

[16] ಅತ್ತಿರ್ಮಿದಿ 413; ಅಬೂ ಹುರೈರಾರಿಂದ ವರದಿಯಾದ ಈ ಹದೀಸನ್ನು ಅತ್ತಿರ್ಮಿದೀ ಹಸನ್ ಎಂದಿದ್ದಾರೆ. ಆದರೆ ಇದರ ಸನದ್‌ನಲ್ಲಿ ಹುರೈಸ್ ಇಬ್ನ್ ಕಬೀಸಃ ಅಥವಾ ಕಬೀಸಃ ಇಬ್ನ್ ಹುರೈಸ್ ಎಂಬ ದುರ್ಬಲ ವ್ಯಕ್ತಿಯಿದ್ದಾರೆ. ಈ ಹದೀಸ್ ವರದಿಯಾದ ಅನೇಕ ಹಾದಿಗಳನ್ನು ಪರಿಗಣಿಸಿ ಅತ್ತಿರ್ಮಿದೀ ಇದನ್ನು ಹಸನ್ ಎಂದಿರಬಹುದು.

[17] ಅಲ್‌ಬುಖಾರೀ 6502

ನಿರ್ವಹಿಸಿದರೆ ಅದು ಪಾಪಗಳನ್ನು ಅಳಿಸಿಹಾಕುತ್ತದೆಯೆಂದು ಹದೀಸ್‌ಗಳಲ್ಲಿ ಹೇಳಲಾಗಿರುವುದು ಕಿರಿಯ ಪಾಪಗಳ ಬಗ್ಗೆಯಾಗಿದೆಯೇ ಹೊರತು ಮಹಾಪಾಪಗಳ ಬಗ್ಗೆಯಲ್ಲ. ಯಾಕೆಂದರೆ ಐದು ವೇಳೆಯ ಕಡ್ಡಾಯ ನಮಾಝ್‌ಗಳು, ಜುಮುಅಃ ನಮಾಝ್, ರಮದಾನ್ ತಿಂಗಳ ಉಪವಾಸ ಮೊದಲಾದ ಮಹಾ ಆರಾಧನೆಗಳು ಕೂಡ ಮಹಾಪಾಪಗಳನ್ನು ಅಳಿಸಿಹಾಕುವುದಿಲ್ಲವೆಂದಿರುವಾಗ ಅವುಗಳಿಗಿಂತ ಕಡಿಮೆ ಶ್ರೇಷ್ಠತೆಯನ್ನು ಹೊಂದಿರುವ ಈ ಸತ್ಕರ್ಮಗಳು ಮಹಾಪಾಪಗಳನ್ನು ಅಳಿಸಿಹಾಕುತ್ತದೆಯೆಂದು ಹೇಳಲು ಸಾಧ್ಯವಿಲ್ಲ.

ಈ ಕಾರಣದಿಂದಲೇ ಬಡ್ಡಿ, ವ್ಯಭಿಚಾರ, ಮಾಟ ಮಾಡುವುದು ಮೊದಲಾದ ಮಹಾಪಾಪಗಳನ್ನು ಸತ್ಕರ್ಮಗಳು ಅಳಿಸಿ ಹಾಕುವುದಿಲ್ಲ; ಬದಲಾಗಿ ಅವುಗಳ ಬಗ್ಗೆ ತೌಬಾ ಮಾಡಬೇಕಾದುದು ಅನಿವಾರ್ಯವಾಗಿದೆ ಮತ್ತು ಅವುಗಳ ಪೈಕಿ ಶಿಕ್ಷೆ ನೀಡಬೇಕಾದ ಪಾಪಗಳಿಗೆ ಶಿಕ್ಷೆ ನೀಡಬೇಕಾದುದು ಕೂಡ ಅನಿವಾರ್ಯ ವಾಗಿದೆಯೆಂದು ಬಹುಸಂಖ್ಯಾತ ಉಲಮಾಗಳು ಅಭಿಪ್ರಾಯಪಟ್ಟಿದ್ದಾರೆ.

ಆದ್ದರಿಂದ ಈ ಶ್ರೇಷ್ಠ ದಿನಗಳಲ್ಲಿ ಎಲ್ಲ ಪಾಪಗಳ ಬಗ್ಗೆಯೂ –ಕಿರಿಯ ಪಾಪಗಳು ಮತ್ತು ಮಹಾ ಪಾಪಗಳು– ತೌಬಾ ಮಾಡಲು ಆತುರಪಡ ಬೇಕಾದುದು ಮುಸ್ಲಿಮನ ಮೇಲೆ ಕಡ್ಡಾಯವಾಗಿದೆ. ಬಹುಶಃ ಅಲ್ಲಾಹು ಅವನ ತೌಬಾವನ್ನು ಸ್ವೀಕರಿಸಿ ಅವನಿಗೆ ಕ್ಷಮೆ ನೀಡಲೂಬಹುದು. ಅವನ ಆಜ್ಞಾಪಾಲನೆಯನ್ನು ಸ್ವೀಕರಿಸಲೂಬಹುದು. ಯಾಕೆಂದರೆ ಶ್ರೇಷ್ಠ ಸಮಯಗಳಲ್ಲಿ ಮಾಡಲಾಗುವ ತೌಬಾಗಳಿಗೆ ಹೆಚ್ಚು ಮಹತ್ವವಿದೆ. ಆದ್ದರಿಂದ ಮನಸ್ಸುಗಳನ್ನು ಆಜ್ಞಾಪಾಲನೆಯ ಕಡೆಗೆ ತಿರುಗಿಸುವುದು, ಸತ್ಕರ್ಮಗಳನ್ನು ಮಾಡಲು ಅದಕ್ಕೆ ಪ್ರೋತ್ಸಾಹ ನೀಡುವುದು, ತಪ್ಪು ಮತ್ತು ಪಾಪಗಳನ್ನು ಒಪ್ಪಿಕೊಂಡು ವಿಷಾದದೊಂದಿಗೆ ಪಶ್ಚಾತ್ತಾಪಪಡುವುದು ಮೊದಲಾದವುಗಳನ್ನು ಹೆಚ್ಚು ಹೆಚ್ಚಾಗಿ ಮಾಡಬೇಕಾಗಿದೆ. ತೌಬಾ ಮಾಡುವುದು ಎಲ್ಲ ಸಮಯಗಳಲ್ಲೂ ಕಡ್ಡಾಯ ವಾಗಿದ್ದರೂ ಸಹ, ಪ್ರತ್ಯೇಕವಾಗಿ ನಾವು ಹೊಸ ವರ್ಷದ ಹೊಸ್ತಿಲಲ್ಲಿರುವ ಈ ಸಂದರ್ಭದಲ್ಲಿ ಇದನ್ನು ಮಾಡಲೇಬೇಕಾಗಿದೆ.

ಓ ಅಲ್ಲಾಹ್, ಸಜ್ಜನರನ್ನು ಸುಧಾರಣೆ ಮಾಡುವವನೇ, ನಮ್ಮ ಹೃದಯಗಳನ್ನು ಸುಧಾರಣೆ ಮಾಡು. ಇಹಲೋಕದಲ್ಲಿ ಮತ್ತು ಪರಲೋಕದಲ್ಲಿ ನಮ್ಮ ನ್ಯೂನತೆಗಳನ್ನು ಮರೆಮಾಚು. ಓ ಅಲ್ಲಾಹ್, ನಮಗೆ ವಿಶ್ವಾಸವು ಇಷ್ಟಕರ ವಾಗುವಂತೆ ಮಾಡು, ಅದನ್ನು ನಮ್ಮ ಹೃದಯಗಳಲ್ಲಿ ಅಲಂಕರಿಸು. ನಮಗೆ ಅವಿಶ್ವಾಸ, ದುಷ್ಕರ್ಮ ಮತ್ತು ಆಜ್ಞೋಲ್ಲಂಘನೆಯು ಅಸಹ್ಯಕರವಾಗುವಂತೆ ಮಾಡು. ನಮ್ಮ ಸನ್ಮಾರ್ಗಿಗಳಲ್ಲಿ ಸೇರಿಸು.

وَصَلَّى اللَّهُ عَلَى نَبِيِّنَا مُحَمَّدٍ...

## ಆಶೂರಾ ಉಪವಾಸದ ಹಿಂದಿರುವ ಯುಕ್ತಿಯೇನು?

عَنِ ابْنِ عَبَّاسٍ ﷺ قَالَ: قَدِمَ رَسُولُ اللَّهِ ﷺ الْمَدِينَةَ فَوَجَدَ الْيَهُودَ يَصُومُونَ يَوْمَ عَاشُورَاءَ، فَسُئِلُوا عَنْ ذَلِكَ، فَقَالُوا: هَذَا الْيَوْمُ الَّذِي أَظْهَرَ اللَّهُ فِيهِ مُوسَى وَبَنِي إِسْرَائِيلَ عَلَى فِرْعَوْنَ، فَنَحْنُ نَصُومُهُ تَعْظِيمًا لَهُ، فَقَالَ رَسُولُ اللَّهِ ﷺ: «نَحْنُ أَوْلَى بِمُوسَى مِنْكُمْ»، فَأَمَرَ بِصِيَامِهِ. [أَخْرَجَهُ الْبُخَارِيُّ وَمُسْلِمٌ] وَفِي رِوَايَةٍ لِمُسْلِمٍ: فَصَامَهُ مُوسَى شُكْرًا، فَنَحْنُ نَصُومُهُ...

“ಇಬ್ನ್ ಅಬ್ಬಾಸ್(ﷺ)ರಿಂದ ವರದಿ: ಅವರು ಹೇಳುತ್ತಾರೆ: ಪ್ರವಾದಿ(ﷺ)ರವರು ಮದೀನಕ್ಕೆ ಬಂದಾಗ ಅಲ್ಲಿ ಯಹೂದರು ಆಶೂರಾ ದಿನ ಉಪವಾಸ ಆಚರಿಸುವುದನ್ನು ಕಂಡರು. ಇದರ ಬಗ್ಗೆ ಅವರೊಂದಿಗೆ (ಯಹೂದರೊಂದಿಗೆ) ಪ್ರಶ್ನಿಸಲಾದಾಗ ಅವರು ಹೇಳಿದರು: ‘ಅಲ್ಲಾಹು ಮೂಸಾರಿಗೆ ಮತ್ತು ಬನೂ ಇಸ್ರಾಈಲರಿಗೆ ಫಿರ್‌ಔನನ ವಿರುದ್ಧ ವಿಜಯವನ್ನು ದಯಪಾಲಿಸಿದ್ದು ಈ ದಿನವಾಗಿದೆ.’ ಆಗ ಪ್ರವಾದಿ(ﷺ)ರವರು ಹೇಳಿದರು: ‘ಮೂಸಾರಿಗೆ ನಿಮಗಿಂತಲೂ

**ಹೆಚ್ಚು ಹತ್ತಿರವಾಗಿರುವವರು ನಾವಾಗಿದ್ದೇವೆ.' [ಅಲ್‌ಬುಖಾರೀ ಮುಸ್ಲಿಮ್] ಮುಸ್ಲಿಮ್‌ನಲ್ಲಿರುವ ಇನ್ನೊಂದು ವರದಿಯಲ್ಲಿ ಹೀಗಿದೆ: 'ಮೂಸಾರವರು ಕೃತಜ್ಞತೆ ಸಲ್ಲಿಸುವುದಕ್ಕಾಗಿ ಆ ದಿನ ಉಪವಾಸ ಆಚರಿಸಿದರು. ಆದ್ದರಿಂದ ನಾವೂ ಆಚರಿಸುತ್ತಿದ್ದೇವೆ.' "** [18]

ಆಶೂರಾ ದಿನದ ಉಪವಾಸವನ್ನು ಶರೀಅತ್ತಿನಲ್ಲಿ ಒಳಪಡಿಸಿರುವುದರ ಹಿಂದಿರುವ ಮಹಾ ಯುಕ್ತಿಯನ್ನು ಈ ಹದೀಸ್ ವಿವರಿಸುತ್ತದೆ. ಅಂದರೆ ಮೂಸಾ(ﷺ)ರನ್ನು ಮತ್ತು ಬನೂ ಇಸ್ರಾಈಲರನ್ನು ರಕ್ಷಿಸಿದ್ದಕ್ಕಾಗಿ ಮತ್ತು ಫಿರ್‌ಔನ್ ಮತ್ತು ಅವನ ಜನರನ್ನು ಮುಳುಗಿಸಿ ನಾಶ ಮಾಡಿದ್ದಕ್ಕಾಗಿ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುವುದಕ್ಕೆ ಮತ್ತು ಆ ದಿನವನ್ನು ಗೌರವಿಸು ವುದಕ್ಕಾಗಿದೆ. ಈ ಕಾರಣದಿಂದಲೇ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುವುದಕ್ಕಾಗಿ ಮೂಸಾ(ﷺ)ರವರು ಅಂದು ಉಪವಾಸ ಆಚರಿಸಿದರು. ಯಹೂದರು ಕೂಡ ಅಂದು ಉಪವಾಸ ಆಚರಿಸಿದರು. ಆದರೆ ಮೂಸಾ(ﷺ)ರವರನ್ನು ಅನುಸರಿಸುವ ವಿಷಯದಲ್ಲಿ ಮುಹಮ್ಮದ್(ﷺ)ರವರ ಸಮುದಾಯವು ಯಹೂದರಿಗಿಂತಲೂ ಹೆಚ್ಚು ಅರ್ಹತೆಯನ್ನು ಹೊಂದಿದೆ. ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುವುದಕ್ಕಾಗಿ ಮೂಸಾ(ﷺ)ರವರು ಅಂದು ಉಪವಾಸ ಆಚರಿಸಿದ್ದರೆ ನಾವು ಕೂಡ ಹಾಗೆಯೇ ಉಪವಾಸ ಆಚರಿಸಬೇಕಾಗಿದೆ. ಈ ಕಾರಣದಿಂದಲೇ ಪ್ರವಾದಿ(ﷺ)ರವರು ಹೇಳಿದರು:

«نَحْنُ أَوْلَى بِمُوسَى مِنْكُمْ» وَفِي رِوَايَةٍ: «فَأَنَا أَحَقُّ بِمُوسَى مِنْكُمْ».

**"ಮೂಸಾ(ﷺ)ರಿಗೆ ನಿಮಗಿಂತಲೂ ಹೆಚ್ಚು ಹತ್ತಿರವಾಗಿರುವವರು ನಾವಾಗಿದ್ದೇವೆ." ಇನ್ನೊಂದು ವರದಿಯಲ್ಲಿ: "ಮೂಸಾ(ﷺ)ರೊಂದಿಗೆ ನಿಮಗಿಂತಲೂ ಹೆಚ್ಚು ಹಕ್ಕುಳ್ಳವನು ನಾನಾಗಿದ್ದೇನೆ."**

---

[18] ಅಲ್‌ಬುಖಾರೀ 3943 ಮುಸ್ಲಿಮ್ 1131

ಅಂದರೆ ಮೂಸಾ(ﷺ)ರನ್ನು ಅನುಸರಿಸುವ ವಿಷಯದಲ್ಲಿ ಹೆಚ್ಚು ದೃಢತೆಯುಳ್ಳವರು ಮತ್ತು ಹತ್ತಿರದಲ್ಲಿರುವವರು ನಾವಾಗಿದ್ದೇವೆ. ಯಾಕೆಂದರೆ ಧರ್ಮದ ಮೂಲ ವಿಷಯಗಳಲ್ಲಿ ನಾವು ಅವರೊಂದಿಗೆ ಸಮಾನವಾಗಿದ್ದೇವೆ ಮತ್ತು ನಾವು ಅವರ ಗ್ರಂಥವನ್ನು ಸತ್ಯಪಡಿಸುತ್ತೇವೆ. ಆದರೆ ನೀವು ಅವರ ಧರ್ಮವನ್ನು ಬದಲಾಯಿಸುವ ಮೂಲಕ ಮತ್ತು ಅವರ ಗ್ರಂಥವನ್ನು ದುರ್ವ್ಯಾಖ್ಯಾನ ಮಾಡುವ ಮೂಲಕ ಅವರಿಗೆ ವಿರುದ್ಧವಾಗಿರುವಿರಿ. ಆದ್ದರಿಂದಲೇ ಪ್ರವಾದಿ(ﷺ)ರವರು ಅಂದು ಉಪವಾಸ ಆಚರಿಸಿದರು ಮತ್ತು ಆಚರಿಸುವಂತೆ ತಮ್ಮ ಸಮುದಾಯಕ್ಕೆ ಪ್ರೋತ್ಸಾಹ ನೀಡಿದರು.

عَنْ أَبِي مُوسَى ﷺ قَالَ: كَانَ يَوْمُ عَاشُورَاءَ يَوْمًا تُعَظِّمُهُ الْيَهُودُ وَتَتَّخِذُهُ عِيدًا، فَقَالَ رَسُولُ اللَّهِ ﷺ: «صُومُوا أَنْتُمْ». [أَخْرَجَهُ الْبُخَارِيُّ وَمُسْلِمٌ] وَفِي رِوَايَةٍ لِمُسْلِمٍ: كَانَ أَهْلُ خَيْبَرَ يَصُومُونَ يَوْمَ عَاشُورَاءَ يَتَّخِذُونَهُ عِيدًا، وَيُلْبِسُونَ نِسَاءَهُمْ فِيهِ حُلِيَّهُمْ وَشَارَتَهُمْ، فَقَالَ رَسُولُ اللَّهِ ﷺ: «فَصُومُوا أَنْتُمْ».

**"ಅಬೂ ಮೂಸಾ(ﷺ)ರಿಂದ ವರದಿ: ಅವರು ಹೇಳುತ್ತಾರೆ: ಆಶೂರಾ ದಿನವು ಯಹೂದರು ಗೌರವಿಸುತ್ತಿದ್ದ ಮತ್ತು ಹಬ್ಬವನ್ನಾಗಿ ಮಾಡಿಕೊಳ್ಳುತ್ತಿದ್ದ ಒಂದು ದಿನವಾಗಿತ್ತು. ಆಗ ಪ್ರವಾದಿ(ﷺ)ರವರು ಹೇಳಿದರು: 'ನೀವು ಉಪವಾಸ ಆಚರಿಸಿರಿ.' " [ಅಲ್‌ಬುಖಾರೀ ಮುಸ್ಲಿಮ್] ಮುಸ್ಲಿಮ್‌ರ ಇನ್ನೊಂದು ವರದಿಯಲ್ಲಿ ಹೀಗಿದೆ: "ಖೈಬರ್ ನಿವಾಸಿಗಳು ಆಶೂರಾ ದಿನದಲ್ಲಿ ಉಪವಾಸ ಆಚರಿಸುತ್ತಿದ್ದರು ಮತ್ತು ಅದನ್ನು ಹಬ್ಬವನ್ನಾಗಿ ಮಾಡಿಕೊಂಡಿದ್ದರು. ಆ ದಿನದಲ್ಲಿ ಅವರ ಮಹಿಳೆಯರಿಗೆ ಆಭರಣಗಳನ್ನು ಮತ್ತು ಪಟ್ಟಿಗಳನ್ನು ತೊಡಿಸುತ್ತಿದ್ದರು. ಆಗ ಪ್ರವಾದಿ(ﷺ)ರವರು ಹೇಳಿದರು: 'ನೀವು ಉಪವಾಸ ಆಚರಿಸಿರಿ.' "** [19]

[19] ಅಲ್‌ಬುಖಾರೀ 2005 ಮುಸ್ಲಿಮ್ 1131

ಆದ್ದರಿಂದ ಬಾಹ್ಯಾರ್ಥದ ಪ್ರಕಾರ ಯಹೂದರಿಗೆ ವಿರುದ್ಧವಾಗುವುದು ಕೂಡ ಆಶೂರಾ ದಿನದಲ್ಲಿ ಉಪವಾಸ ಆಚರಿಸುವುದರ ಹಿಂದಿರುವ ಯುಕ್ತಿಯಲ್ಲಿ ಸೇರಿದ್ದಾಗಿದೆ. ಅದೇನೆಂದರೆ ಆ ದಿನವನ್ನು ಹಬ್ಬವನ್ನಾಗಿ ಮಾಡಿಕೊಳ್ಳದೆ ಕೇವಲ ಅದರಲ್ಲಿ ಉಪವಾಸ ಮಾತ್ರ ಆಚರಿಸುವುದು. ಯಾಕೆಂದರೆ ಹಬ್ಬದ ದಿನದಲ್ಲಿ ಉಪವಾಸ ಆಚರಿಸುವಂತಿಲ್ಲ. ಯಹೂದರಿಗೆ ವಿರುದ್ಧವಾಗುವ ಒಂದು ವಿಧವು ಇದಾಗಿದೆ. ಇನ್ನೊಂದು ವಿಧವು ಒಂಬತ್ತನೇ ದಿನದಂದು ಕೂಡ ಉಪವಾಸ ಆಚರಿಸುವುದಾಗಿದೆ. ಇದರ ಬಗ್ಗೆ ಮುಂದೆ ವಿವರಿಸಲಾಗು ವುದು, ಇನ್‌ಶಾ ಅಲ್ಲಾಹ್.

ಆಶೂರಾ ದಿನದ ವಿಷಯದಲ್ಲಿ ಎರಡು ಪಂಗಡಗಳು ದಾರಿತಪ್ಪಿವೆ. ಒಂದು ಪಂಗಡವು ಯಹೂದರನ್ನು ಅನುಕರಿಸಿ ಈ ದಿನವನ್ನು ಹಬ್ಬ ಮತ್ತು ಸಂತೋಷದ ದಿನವನ್ನಾಗಿ ಮಾಡಿಕೊಂಡಿದೆ. ಅವರು ಅಂದು ಮದರಂಗಿ ಮತ್ತು ಕಾಡಿಗೆಯನ್ನು ಹಚ್ಚುವುದು, ಕುಟುಂಬಕ್ಕೆ ಹೆಚ್ಚು ಹೆಚ್ಚಾಗಿ ಖರ್ಚು ಮಾಡುವುದು, ವಿಶೇಷ ಅಡುಗೆಗಳನ್ನು ತಯಾರಿಸುವುದು, ಮೊದಲಾದ ಅಜ್ಞಾನದಿಂದ ಕೂಡಿದ ಕರ್ಮಗಳನ್ನು ಮಾಡುತ್ತಾರೆ.

ಇನ್ನೊಂದು ಪಂಗಡವು ಆಶೂರಾ ದಿನವನ್ನು ಶೋಕಾಚರಣೆಯ ಮತ್ತು ದುಃಖಾಚರಣೆಯ ದಿನವನ್ನಾಗಿ ಮಾಡಿಕೊಂಡಿದೆ. ಹುಸೈನ್(ﷺ)ರವರು ಈ ದಿನದಲ್ಲಿ ಕೊಲೆಯಾದುದು ಇದಕ್ಕಿರುವ ಕಾರಣವಾಗಿದೆ. ಕೆನ್ನೆಗೆ ಹೊಡೆಯುವುದು, ಬಟ್ಟೆಗಳನ್ನು ಹರಿಯುವುದು, ಶೋಕ ಗೀತೆಗಳನ್ನು ಹಾಡುವುದು, ಸತ್ಯಕ್ಕಿಂತಲೂ ಹೆಚ್ಚು ಸುಳ್ಳನ್ನೇ ಹೊಂದಿರುವ ವಾರ್ತೆಗಳನ್ನು ವರದಿ ಮಾಡುವುದು ಮೊದಲಾದ ಜಾಹಿಲೀ ಕಾಲದ ಚಿಹ್ನೆಗಳನ್ನು ಅವರು ಪ್ರಕಟಿಸುತ್ತಾರೆ. ಅವರ ಉದ್ದೇಶವು ಫಿತ್ನವುಂಟು ಮಾಡುವುದಾಗಿದೆ ಮತ್ತು ಸಮುದಾಯದಲ್ಲಿ ಒಡಕನ್ನು ಮೂಡಿಸುವುದಾಗಿದೆ. ಇದು ಇಹಲೋಕದಲ್ಲಿ ತಮ್ಮ ಪರಿಶ್ರಮಗಳನ್ನು ಕಳಕೊಂಡವರ ಕರ್ಮಗಳಾಗಿವೆ. ಅವರು ಆ ಕರ್ಮಗಳನ್ನು ಒಳಿತೆಂದೇ ಭಾವಿಸಿಕೊಂಡಿದ್ದಾರೆ.

ಅಲ್ಲಾಹು ಅಹ್ಲುಸ್ಸುನ್ನತ್ ವಲ್ ಜಮಾಅತ್‌ಗೆ ಸರಿಯಾದ ಮಾರ್ಗದರ್ಶನ ಮಾಡಿದ್ದಾನೆ. ಆದ್ದರಿಂದ ಅವರು ಅವರ ಪ್ರವಾದಿಯ ಆದೇಶದಂತೆ ಆ ದಿನದಲ್ಲಿ ಉಪವಾಸ ಆಚರಿಸುತ್ತಾರೆ. ಆ ದಿನದ ವಿಷಯದಲ್ಲಿ ಯಹೂದರನ್ನು ಅನುಕರಿಸುವುದನ್ನಾಗಲಿ, ಶೈತಾನನು ಆಜ್ಞಾಪಿಸುವ ಬಿದ್‌ಅತ್‌ಗಳನ್ನು ಆಚರಿಸು ವುದನ್ನಾಗಲಿ ಮಾಡುವುದಿಲ್ಲ.

ಓ ಅಲ್ಲಾಹ್, ನಮಗೆ ನಮ್ಮ ಧರ್ಮದ ಬಗ್ಗೆ ಪಾಂಡಿತ್ಯವನ್ನು ನೀಡು. ಅದರ ಪ್ರಕಾರ ಅಮಲ್ ಮಾಡಲು ಮತ್ತು ಅದರಲ್ಲಿ ಸ್ಥಿರವಾಗಿರಲು ಸೌಭಾಗ್ಯವನ್ನು ನೀಡು. ನಮ್ಮನ್ನು ಸುಲಭವಾಗಿರುವುದರ ಕಡೆಗೆ ಸುಲಭಗೊಳಿಸು ಮತ್ತು ಕಷ್ಟವಾಗಿರುವುದರಿಂದ ದೂರಗೊಳಿಸು. ಪರಲೋಕದಲ್ಲೂ ಇಹಲೋಕದಲ್ಲೂ ನಮಗೆ ಕ್ಷಮೆಯನ್ನು ನೀಡು.

وَصَلَّى اللَّهُ عَلَى نَبِيِّنَا مُحَمَّدٍ...

## ಹತ್ತನೇ ದಿನದೊಂದಿಗೆ ಒಂಬತ್ತನೇ ದಿನ ಕೂಡ ಉಪವಾಸ ಆಚರಿಸುವುದು ಪ್ರೋತ್ಸಾಹನೀಯವಾಗಿದೆ

عَنِ ابْنِ عَبَّاسٍ ﵄ أَنَّ رَسُولَ اللَّهِ ﷺ لَمَّا صَامَ يَوْمَ عَاشُورَاءَ وَأَمَرَ بِصِيَامِهِ قَالُوا: يَا رَسُولَ اللَّهِ، إِنَّهُ يَوْمٌ تُعَظِّمُهُ الْيَهُودُ وَالنَّصَارَى، فَقَالَ رَسُولُ اللَّهِ ﷺ: «فَإِذَا كَانَ الْعَامُ الْمُقْبِلُ -إِنْ شَاءَ اللَّهُ- صُمْنَا الْيَوْمَ التَّاسِعَ». قَالَ: فَلَمْ يَأْتِ الْعَامُ الْمُقْبِلُ حَتَّى تُوُفِّيَ رَسُولُ اللَّهِ ﷺ. [أَخْرَجَهُ مُسْلِمٌ] وَفِي رِوَايَةٍ لَهُ: «لَئِنْ بَقِيتُ إِلَى قَابِلٍ لَأَصُومَنَّ التَّاسِعَ».

**“ಇಬ್ನ್ ಅಬ್ಬಾಸ್(ﷺ)ರಿಂದ ವರದಿ: ಅವರು ಹೇಳುತ್ತಾರೆ: ಪ್ರವಾದಿ(ﷺ)ರವರು ಆಶೂರಾ ದಿನದಂದು ಉಪವಾಸ ಆಚರಿಸಿದಾಗ ಮತ್ತು ಉಪವಾಸ ಆಚರಿಸುವಂತೆ ಆಜ್ಞಾಪಿಸಿದಾಗ ಸಹಾಬಾಗಳು ಹೇಳಿದರು: ಓ ಅಲ್ಲಾಹನ ರಸೂಲರೇ, ಅದು ಯಹೂದರು ಮತ್ತು ಕ್ರೈಸ್ತರು ಗೌರವಿಸುವ ದಿನವಾಗಿದೆ. ಆಗ ಅಲ್ಲಾಹನ ರಸೂಲ್(ﷺ)ರವರು ಹೇಳಿದರು: ಮುಂದಿನ ವರ್ಷ ಬಂದರೆ –ಇನ್‌ಶಾ ಅಲ್ಲಾಹ್– ನಾವು ಒಂಬತ್ತನೇ ದಿನದಲ್ಲೂ ಉಪವಾಸ ಆಚರಿಸುವೆವು. ಆದರೆ ಮುಂದಿನ ವರ್ಷ ಬರುವುದಕ್ಕೆ ಮೊದಲೇ ಅಲ್ಲಾಹನ ರಸೂಲ್(ﷺ)ರವರು ನಿಧನರಾದರು. [ಮುಸ್ಲಿಮ್] ಇನ್ನೊಂದು ವರದಿಯಲ್ಲಿ: ನಾನು ಮುಂದಿನ ವರ್ಷದ ತನಕ ಬಾಕಿಯಾದರೆ ಒಂಬತ್ತನೇ ದಿನದಲ್ಲೂ ಉಪವಾಸ ಆಚರಿಸುವೆನು.’ ”** [20]

ಆಶೂರಾ ದಿನದಲ್ಲಿ ಉಪವಾಸ ಆಚರಿಸಲು ಉದ್ದೇಶಿಸುವವರು ಅದರ ಹಿಂದಿನ ದಿನದಲ್ಲೂ (ಒಂಬತ್ತನೇ ದಿನದಲ್ಲೂ) ಉಪವಾಸ ಆಚರಿಸುವುದು ಪ್ರೋತ್ಸಾಹನೀಯವಾಗಿದೆಯೆಂದು ಈ ಹದೀಸ್ ಸೂಚಿಸುತ್ತದೆ. ಆದ್ದರಿಂದ ಪ್ರವಾದಿ(ﷺ)ರವರು ಉಪವಾಸ ಆಚರಿಸದಿದ್ದರೂ ಕೂಡ ಒಂಬತ್ತನೇ ದಿನದಲ್ಲಿ ಉಪವಾಸ ಆಚರಿಸುವುದು ಸುನ್ನತ್ತಾಗಿದೆ. ಯಾಕೆಂದರೆ ಅಂದು ಉಪವಾಸ ಆಚರಿಸುವೆನೆಂದು ಅವರು ದೃಢನಿರ್ಧಾರ ಕೈಗೊಂಡಿದ್ದಾರೆ. ಒಂಬತ್ತನೇ ದಿನದಂದು ಉಪವಾಸ ಆಚರಿಸುವುದರ ಉದ್ದೇಶವು –ಹೆಚ್ಚು ಬಲ್ಲವನು ಅಲ್ಲಾಹನಾಗಿದ್ದಾನೆ– ಆ ದಿನವನ್ನು ಹತ್ತನೇ ದಿನದೊಂದಿಗೆ ಸೇರಿಸಿ ಉಪವಾಸ ಆಚರಿಸುವ ಮೂಲಕ ಯಹೂದ ಕ್ರೈಸ್ತರಿಗೆ ವಿರುದ್ಧವಾಗುವುದಾಗಿದೆ. ಯಾಕೆಂದರೆ ಅವರು ಹತ್ತನೇ ದಿನದಲ್ಲಿ ಮಾತ್ರ ಉಪವಾಸ ಆಚರಿಸುತ್ತಾರೆ. ಸಹೀಹ್ ಮುಸ್ಲಿಮ್‌ನಲ್ಲಿರುವ ಕೆಲವು ವರದಿಗಳಿಂದ ಇದನ್ನು ಅರ್ಥಮಾಡಿ ಕೊಳ್ಳಲಾಗುತ್ತದೆ. ಇಬ್ನ್ ಅಬ್ಬಾಸ್(ﷺ)ರವರು ಹೀಗೆ ಹೇಳಿದ್ದಾಗಿ ದೃಢಪಟ್ಟಿದೆ:

صُومُوا التَّاسِعَ وَالْعَاشِرَ خَالِفُوا الْيَهُودَ.

[20] ಮುಸ್ಲಿಮ್ 1134

**“ಒಂಬತ್ತನೇ ಮತ್ತು ಹತ್ತನೇ ದಿನಗಳಲ್ಲಿ ಉಪವಾಸ ಆಚರಿಸಿರಿ. ಯಹೂದರಿಗೆ ವಿರುದ್ಧವಾಗಿರಿ.”** [21]

ಅವಿಶ್ವಾಸಿಗಳನ್ನು ಮತ್ತು ಯಹೂದ ಕ್ರೈಸ್ತರನ್ನು ಅನುಕರಿಸುವುದನ್ನು ಮುಸ್ಲಿಮರಿಗೆ ವಿರೋಧಿಸಲಾಗಿದೆಯೆಂಬುದಕ್ಕೆ ಇದರಲ್ಲಿ ಸ್ಪಷ್ಟ ಪುರಾವೆಯಿದೆ. ಯಾಕೆಂದರೆ ಅವರ ಅನುಕರಣೆಯನ್ನು ತೊರೆಯುವುದರಲ್ಲಿ ಮಹಾ ಪ್ರಯೋಜನಗಳಿವೆ. ಅವರನ್ನು ಪ್ರೀತಿಸುವುದು, ಅವರೆಡೆಗೆ ವಾಲುವುದು ಮೊದಲಾದವುಗಳೆಡೆಗೆ ಒಯ್ಯುವ ದಾರಿಗಳನ್ನು ಇದು ಕಡಿದು ಹಾಕುತ್ತದೆ. ಅವರಿಂದ ಸಂಪೂರ್ಣ ಮುಕ್ತರಾಗಬೇಕೆಂಬುದನ್ನು ಸಾಕ್ಷಾತ್ಕರಿಸಲು ಇದರಿಂದ ಸಾಧ್ಯವಾಗುತ್ತದೆ. ಅಲ್ಲಾಹನಿಗೋಸ್ಕರ ಅವರನ್ನು ದ್ವೇಷಿಸಲು ಸಾಧ್ಯವಾಗುತ್ತದೆ. ಮಾತ್ರವಲ್ಲದೆ ಇದರಿಂದಾಗಿ ಮುಸ್ಲಿಮರಿಗೆ ಸ್ವಾತಂತ್ರ್ಯವೂ ಹಿರಿಮೆಯೂ ಲಭ್ಯವಾಗುತ್ತದೆ.

ಉಲಮಾಗಳು ಹೇಳುವ ಪ್ರಕಾರ ಆಶೂರಾ ಉಪವಾಸ ಆಚರಿಸುವುದರ ಅತ್ಯುತ್ತಮ ವಿಧಾನವು: ಮೂರು ದಿನಗಳಲ್ಲಿ ಉಪವಾಸ ಆಚರಿಸುವುದು. ಅಂದರೆ ಒಂಬತ್ತನೇ, ಹತ್ತನೇ ಮತ್ತು ಹನ್ನೊಂದನೇ ದಿನಗಳಲ್ಲಿ ಉಪವಾಸ ಆಚರಿಸುವುದು. ಇದಕ್ಕೆ ಅವರು ಪುರಾವೆಯಾಗಿ ಮಂಡಿಸುವುದು ಇಬ್ನ್ ಅಬ್ಬಾಸ್(ﷺ)ರವರ ಹದೀಸನ್ನಾಗಿದೆ:

«خَالِفُوا الْيَهُودَ وَصُومُوا قَبْلَهُ يَوْمًا وَبَعْدَهُ يَوْمًا».

**“ಯಹೂದರಿಗೆ ವಿರುದ್ಧವಾಗಿರಿ. ಅದರ ಮುಂದಿನ ದಿನದಲ್ಲೂ ನಂತರದ ದಿನದಲ್ಲೂ ಉಪವಾಸ ಆಚರಿಸಿರಿ.”** [22]

ಆದರೆ ಈ ಹದೀಸ್ ದುರ್ಬಲವಾಗಿದೆ. ಈ ಹದೀಸನ್ನು ಅವಲಂಬಿಸುವಂತಿಲ್ಲ. ಆದರೆ ಈ ಮೂರು ದಿನಗಳು ಪವಿತ್ರ ಮಾಸದಲ್ಲಿ ಒಳಪಟ್ಟಿರುವುದರಿಂದ

---

[21] ಅಬ್ದುರ್ರಝ್ಝಾಕ್ 4/287; ಅತ್ತಹಾವೀ 2/78; ಅಲ್‌ಬೈಹಕೀ 4/278; ಇಬ್ನ್ ಜುರೈಜ್‌ರಿಂದ, ಅತಾಅ್‌ರಿಂದ, ಇಬ್ನ್ ಅಬ್ಬಾಸ್‌ರಿಂದ; ಇದರ ಸನದ್ ಸಹೀಹಾಗಿದೆ.

[22] ಅಲ್‌ಬೈಹಕೀ 4/287

ಇವುಗಳಲ್ಲಿ ಉಪವಾಸ ಆಚರಿಸುವುದರಿಂದ ಲಭ್ಯವಾಗುವ ಶ್ರೇಷ್ಠತೆಯು ಆಶೂರಾ ದಿನದ ಶ್ರೇಷ್ಠತೆಯೊಂದಿಗೆ ಲಭ್ಯವಾಗುವ ಹೆಚ್ಚುವರಿ ಶ್ರೇಷ್ಠತೆಯಾಗಿದೆ ಎಂಬ ದೃಷ್ಟಿಯಲ್ಲಿ ನೋಡುವುದಾದರೆ ಈ ಮೂರು ದಿನಗಳಲ್ಲಿ ಉಪವಾಸ ಆಚರಿಸುವುದು ಪ್ರೋತ್ಸಾಹನೀಯವಾಗಿದೆ. ಮಾತ್ರವಲ್ಲದೆ ಪ್ರತಿ ತಿಂಗಳಲ್ಲಿ ಮೂರು ದಿನ ಉಪವಾಸ ಆಚರಿಸುವುದರ ಶ್ರೇಷ್ಠತೆಯೂ ಇದರಿಂದ ಲಭ್ಯವಾಗುತ್ತದೆ.

ಇಮಾಮ್ ಅಹ್ಮದ್‌ರವರು ಹೇಳುತ್ತಾರೆ:

مَنْ أَرَادَ أَنْ يَصُومَ عَاشُورَاءَ صَامَ التَّاسِعَ وَالْعَاشِرَ إِلَّا أَنْ تُشَكَّلَ الشُّهُورُ فَيَصُومُ ثَلَاثَةَ أَيَّامٍ، ابْنُ سِيرِينَ يَقُولُ ذَلِكَ.

**"ಯಾರಾದರೂ ಆಶೂರಾ ದಿನದಲ್ಲಿ ಉಪವಾಸ ಆಚರಿಸಲು ಉದ್ದೇಶಿಸುವುದಾದರೆ ಅವರು ಒಂಬತ್ತನೇ ಮತ್ತು ಹತ್ತನೇ ದಿನಗಳಲ್ಲಿ ಉಪವಾಸ ಆಚರಿಸಬೇಕು. ಆದರೆ ತಿಂಗಳುಗಳ ವಿಷಯದಲ್ಲಿ ಸಂಶಯವಾದರೆ ಅವನು ಮೂರು ದಿನ ಉಪವಾಸ ಆಚರಿಸಬೇಕು. ಇದು ಇಬ್ನ್ ಸೀರೀನ್‌ರ ಅಭಿಪ್ರಾಯವಾಗಿದೆ."** [23]

ಎರಡನೆ ವಿಧಾನವು: ಒಂಬತ್ತನೇ ಮತ್ತು ಹತ್ತನೇ ದಿನಗಳಲ್ಲಿ ಉಪವಾಸ ಆಚರಿಸುವುದು. ಹೆಚ್ಚಿನ ಹದೀಸ್‌ಗಳೂ ಇದನ್ನೇ ಸೂಚಿಸುತ್ತದೆ.

ಮೂರನೇ ವಿಧಾನವು: ಒಂಬತ್ತನೇ ಮತ್ತು ಹತ್ತನೇ ದಿನಗಳಲ್ಲಿ ಅಥವಾ ಹತ್ತನೇ ಮತ್ತು ಹನ್ನೊಂದನೇ ದಿನಗಳಲ್ಲಿ ಉಪವಾಸ ಆಚರಿಸುವುದು. ಇದಕ್ಕೆ ಪುರಾವೆಯಾಗಿ ಅವರು ಇಬ್ನ್ ಅಬ್ಬಾಸ್(ﷺ)ರವರ ಹದೀಸನ್ನು ಪುರಾವೆ ಯಾಗಿ ಮಂಡಿಸುತ್ತಾರೆ:

«صُومُوا يَوْمَ عَاشُورَاءَ، وَخَالِفُوا فِيهِ الْيَهُودَ، صُومُوا قَبْلَهُ يَوْمًا أَوْ بَعْدَهُ يَوْمًا».

[23] ಅಲ್‌ಮುಗ್ನಿ 4/441; ಇಕ್ತಿದಾಉ ಸ್ಸಿರಾತಿಲ್ ಮುಸ್ತಕೀಮ್ 1/419

**“ಆಶೂರಾ ದಿನದಲ್ಲಿ ಉಪವಾಸ ಆಚರಿಸಿರಿ. ಅದರಲ್ಲಿ ಯಹೂದರಿಗೆ ವಿರುದ್ಧವಾಗಿರಿ. ಅದರ ಮುಂದಿನ ದಿನದಲ್ಲಿ ಅಥವಾ ನಂತರದ ದಿನದಲ್ಲಿ ಉಪವಾಸ ಆಚರಿಸಿರಿ.”** [24]

ಈ ಹದೀಸ್ ದುರ್ಬಲವಾಗಿದೆ.

ನಾಲ್ಕನೆಯ ವಿಧಾನವು: ಹತ್ತನೇ ದಿನದಲ್ಲಿ ಮಾತ್ರ ಉಪವಾಸ ಆಚರಿಸುವುದು. ಉಲಮಾಗಳಲ್ಲಿ ಕೆಲವರು ಇದನ್ನು ಕರಾಹತ್ ಎಂದಿದ್ದಾರೆ. ಯಾಕೆಂದರೆ ಇದರಲ್ಲಿ ಯಹೂದ ಕ್ರೈಸ್ತರ ಅನುಕರಣೆಯಿದೆ. ಇದು ಇಬ್ನ್ ಅಬ್ಬಾಸ್‌ರವರ ಪ್ರಸಿದ್ಧ ಅಭಿಪ್ರಾಯವಾಗಿದೆ. ಇದು ಇಮಾಮ್ ಅಹ್ಮದ್ ಮತ್ತು ಕೆಲವು ಹನಫೀ ಉಲಮಾಗಳ ಅಭಿಪ್ರಾಯವೂ ಆಗಿದೆ. ಆದರೆ ಇತರರು ಹೇಳುತ್ತಾರೆ: ಅದು ಕರಾಹತ್ ಆಗುವುದಿಲ್ಲ. ಯಾಕೆಂದರೆ ಆಶೂರಾ ದಿನವು ಶ್ರೇಷ್ಠ ದಿನಗಳಲ್ಲೊಂದಾಗಿದೆ. ಉಪವಾಸ ಆಚರಿಸುವ ಮೂಲಕ ಆ ಶ್ರೇಷ್ಠತೆಯನ್ನು ಪಡೆಯುವುದು ಪ್ರೋತ್ಸಾಹನೀಯವಾಗಿದೆ. ಸ್ಪಷ್ಟವಾಗಿ ಹೇಳುವುದಾದರೆ ಅದರ ಮುಂದಿನ ಅಥವಾ ನಂತರದ ದಿನ ಉಪವಾಸ ಆಚರಿಸಲು ಸಾಧ್ಯವಿದ್ದೂ ಕೂಡ ಅಂದು ಮಾತ್ರ ಉಪವಾಸ ಆಚರಿಸಿದರೆ ಅದು ಕರಾಹತ್ ಆಗುವುದು.

---

[24] ಅಹ್ಮದ್ 4/52; ಇಬ್ನ್ ಖುಝೈಮಃ 3/290; ಅತ್ತಹಾವೀ ‘ಶರ್ಹು ಮಆನಿಲ್ ಆಸಾರ್’ನಲ್ಲಿ 2/78; ಅಲ್‌ಬೈಹಕೀ 4/287; ಮುಹಮ್ಮದ್ ಇಬ್ನ್ ಅಬ್ದುರ್ರಹ್ಮಾನ್ ಇಬ್ನ್ ಅಬೀ ಲೈಲಾರಿಂದ, ದಾವೂದ್ ಇಬ್ನ್ ಅಲೀರಿಂದ, ಅವರ ತಂದೆಯಿಂದ, ಅವರ ತಾತ ಇಬ್ನ್ ಅಬ್ಬಾಸ್‌ರಿಂದ ಮರ್ಫೂಅ್ ಆಗಿ ವರದಿ ಮಾಡಿದ್ದಾರೆ. ಇದರ ಸನದ್ ದಈಫ್ ಆಗಿದೆ. ಇದು ಮರ್ಫೂಅ್ ಆಗಿ ದೃಢಪಟ್ಟಿಲ್ಲ. ಯಾಕೆಂದರೆ:

1. ಅಲ್‌ಹಾಫಿದ್ ಇಬ್ನ್ ಹಜರ್ ‘ಅತ್ತಕ್ರೀಬ್’ನಲ್ಲಿ ಹೇಳಿದಂತೆ ಮುಹಮ್ಮದ್ ಇಬ್ನ್ ಅಬ್ದುರ್ರಹ್ಮಾನ್ ಇಬ್ನ್ ಅಬೀ ಲೈಲಾ ಜ್ಞಾಪಕಶಕ್ತಿಯಲ್ಲಿ ದುರ್ಬಲರಾಗಿದ್ದಾರೆ.
2. ದಾವೂದ್ ಇಬ್ನ್ ಅಲೀ ಇಬ್ನ್ ಅಬ್ದುಲ್ಲಾಹ್ ಇಬ್ನ್ ಅಬ್ಬಾಸ್ ಅಲ್‌ಹಾಶಿಮೀ ಯವರನ್ನು ಇಬ್ನ್ ಹಿಬ್ಬಾನ್‌ರವರು ‘ಅಸ್ಸಿಕಾತ್’ನಲ್ಲಿ (6/281) ಉದ್ಧರಿಸಿ ಹೇಳುತ್ತಾರೆ: “ಇವರು ತಪ್ಪು ಮಾಡುತ್ತಾರೆ.” ಅಲ್‌ಹಾಫಿದ್ ಇಬ್ನ್ ಹಜರ್ ‘ತಕ್ರೀಬ್’ನಲ್ಲಿ ಹೇಳುತ್ತಾರೆ: “ಸ್ವೀಕಾರಯೋಗ್ಯ” ಅಂದರೆ ಮುತಾಬಅತ್ ಇದ್ದರೆ ಮಾತ್ರ. ಇಲ್ಲದಿದ್ದರೆ ಅವರು ಹದೀಸ್‌ನ ವಿಷಯದಲ್ಲಿ ಅಷ್ಟು ಯೋಗ್ಯರಲ್ಲ. ಆರು ಹದೀಸ್ ಗ್ರಂಥಗಳಲ್ಲಿ ಅವರಿಂದ ವರದಿಯಾದುದು ಒಂದೇ ಒಂದು ಹದೀಸ್ ಮಾತ್ರವಾಗಿದೆ. ಅದು ಅತ್ತಿರ್ಮಿದಿಯಲ್ಲಿದೆ (3419).
3. ಮರ್ಫೂಅ್‌ನಲ್ಲಿ ನ್ಯೂನತೆಯಿದೆ. ಇದೇ ಹದೀಸ್ ಮೌಕೂಫ್ ಆಗಿ ಇಬ್ನ್ ಜುರೈಜ್‌ರಿಂದ, ಅತಾಅ್‌ರಿಂದ, ಇಬ್ನ್ ಅಬ್ಬಾಸ್‌ರಿಂದ ವರದಿಯಾಗಿದೆ. ಇವರು ಈ ಹದೀಸ್ ಮರ್ಫೂಅ್ ಆಗಿ ವರದಿಯಾದ ಸನದ್‌ನಲ್ಲಿರುವವರಿಗಿಂತಲೂ ವಿಶ್ವಾಸಯೋಗ್ಯರಾಗಿದ್ದಾರೆ.

ಆದರೆ ಅಂದು ಮಾತ್ರ ಉಪವಾಸ ಆಚರಿಸಿದವರಿಗೆ ಅದರ ಪ್ರತಿಫಲವು ನಿಷಿದ್ಧವಾಗುವುದಿಲ್ಲ; ಬದಲಾಗಿ ಅಲ್ಲಾಹು ಇಚ್ಛಿಸಿದರೆ ಅವರಿಗೆ ಅದರ ಪ್ರತಿಫಲವು ಲಭ್ಯವಾಗುವುದು.

ಓ ಅಲ್ಲಾಹ್, ನಿನ್ನನ್ನು ಸಂತೃಪ್ತಗೊಳಿಸುವುದರ ಕಡೆಗೆ ನಮಗೆ ತೌಫೀಕ್ ನೀಡು, ನಿನ್ನ ಆಜ್ಞೋಲ್ಲಂಘನೆ ಮಾಡುವುದರಿಂದ ನಮ್ಮನ್ನು ದೂರಗೊಳಿಸು. ನಿನ್ನ ಸಜ್ಜನ ದಾಸರಲ್ಲಿ ಮತ್ತು ನಿನ್ನ ವಿಜಯಿ ಪಕ್ಷದಲ್ಲಿ ನಮ್ಮನ್ನು ಸೇರಿಸು. ನಮಗೆ ಕ್ಷಮೆ ನೀಡು ಮತ್ತು ನಮ್ಮ ಪಶ್ಚಾತ್ತಾಪವನ್ನು ಸ್ವೀಕರಿಸು. ನಮಗೂ ನಮ್ಮ ತಂದೆ ತಾಯಂದಿರಿಗೂ ಕ್ಷಮೆ ನೀಡು.

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلَى آلِهِ وَصَحْبِهِ أَجْمَعِين .

*********